ಪತ್ರಿಕೆಯು ಅಲ್ಲಿ ಬಂತು. ಆ ಪ್ರಶ್ನೆ ಪತ್ರಿಕೆಯನ್ನು ಟೀಚರ್ಸ್‌ಗೆ ಸಾಲ್ವ್ ಮಾಡಲು ಬರುತ್ತಿಲ್ಲ ಸ್ಟೂಡೆಂಟ್ಸ್ ಹೇಗೆ ಸಾಲ್ವ್ ಮಾಡುತ್ತಾರೆ? ಈ ಪರಿಸ್ಥಿತಿಯನ್ನು ನೋಡಿ ಸೆನ್ಸಿಟಿವ್ ಸ್ಟೂಡೆಂಟ್ಸ್ ಏನಿದ್ದಾರೆ ಅವರು ಆತ್ಮಹತ್ಯೆ ಮಾಡಿಕೊಳ್ಳುವ ಪ್ರಯತ್ನಪಟ್ಟರು. ಇದೊಂದು ಬಹಳ ಇರ್‌ರೆಸ್ಪಾನ್ಸಿಬಲ್ ಕೆಲಸವಾಗಿದೆ. ಬೇಜಾವಾಬ್ದಾರಿ ಕೆಲಸವಾಗಿದೆ. ಟೆಕ್ಸ್‌ಬುಕ್‌ನಲ್ಲಿ ಯಾವ ಸಿಲೆಬಸ್ ಇಲ್ಲ, ಅಂಥ ಕ್ವೊಶ್ಚನ್ ಕೇಳುವುದು ತಪ್ಪು ಎಂದು ಮಾನ್ಯ ಸಚಿವರ ಗಮನಕ್ಕೆ ತರುತ್ತಿದ್ದೇನೆ. ಈ ಪ್ರಕಾರ ಆಗಬಾರದು. ನಮ್ಮ ಸರಕಾರದಲ್ಲಿ ಇದು ಆಗಬಾರದೆಂದು ನಾನು ಸಲಹೆ ಕೊಡುತ್ತೇನೆ. ಇದು ಬಹಳ ಮಹತ್ವದ ಮತ್ತು ಸ್ಟೂಡೆಂಟ್ಸ್‌ಗಳ ಜೀವನಕ್ಕೆ ಸಂಬಂಧಪಟ್ಟ ಪ್ರಶ್ನೆಯಾಗಿದೆ. ಯಾವಾಗ ಪ್ರಶ್ನೆ ಪತ್ರಿಕೆಯೇ ಕರೆಕ್ಟ್ ಇಲ್ಲ, ಆಗ ಪರ್‌ಸೆಂಟೇಜ್ ಆಫ್ ರಿಸಲ್ಟ್‌ನ್ನು ಗ್ರೇಸ್ ಮಾರ್ಕ್‌ಗಳನ್ನು ಕೊಟ್ಟು ಹೆಚ್ಚು ಮಾಡಿದರೆ ಆದರಿಂದ ಏನು ಉಪಯೋಗ? ಪ್ರಶ್ನೆಯೇ ತಪ್ಪಾಗಿದ್ದರೆ ಉತ್ತರ ಪತ್ರಿಕೆಯನ್ನು ಹೇಗೆ ಇವ್ಯಾಲು ವೇಟ್ ಮಾಡುತ್ತೀರಿ? ಪ್ರಶ್ನೆ ತಪ್ಪಿರುವಾಗ 100ರಷ್ಟು ಗ್ರೇಸ್ ಮಾರ್ಕ್ ಕೊಟ್ಟು ಏನು ಉಪಯೋಗ ಬಂತು?

ಪ್ರೊ।। ಬಿ.ಕೆ. ಚಂದ್ರೇಶೇಖರ್ : ಮಾನ್ಯ ಅಧ್ಯಕ್ಷರೇ, ನಾನು ಅವಾಗಲೇ ಹೇಳಿದ್ದೇನೆ. ಈ ತಪ್ಪು ಆಗಿ ಹೋಗಿ ಬಿಟ್ಟಿದೆ. ಇದರಿಂದಾಗಿ ಅವರಿಗೆ ಯಾವ ರೀತಿಯಲ್ಲೂ ಫೀನಲೈಸ್ ಮಾಡಬಾರದು ಎಂದು ಯಾವುದೇ ಒಂದು ಫಾರ್ಮೂಲಾ ಕಂಡುಹಿಡಿದು ಅವರಿಗೆ ತೊಂದರೆಯಾಗದ ರೀತಿಯಲ್ಲಿ ಈ ಸಾರಿ ಮಾಡಿದ್ದೇವೆ. ಮುಖ್ಯವಾದ ವಿಚಾರ, ಈ ಬಗ್ಗೆ ಗೌಪ್ಯತೆ ಕಾಪಾಡಿಕೊಳ್ಳಬೇಕು. ಯಾವ ಶಿಕ್ಷಕರನ್ನು, ಎಲ್ಲಿ ಹಿಡಿದು ಯಾವ ರೀತಿಯಲ್ಲಿ ಭಾಷಾಂತರ ಮಾಡಬೇಕೆಂಬುದನ್ನು ನಾವು ಬಹಳ ಎಚ್ಚರಿಕೆಯಿಂದ ಮಾಡಬೇಕಾಗುತ್ತದೆ. ಈ ತಪ್ಪು ಪುನಃ ಮುಂದಿನ ವರ್ಷದಿಂದ ಆಗದಿರುವ ಹಾಗೆ ನಾನು ನೋಡಿಕೊಳ್ಳುತ್ತೇನೆ.

ಅಧ್ಯಕ್ಷರು : ಪ್ರಶ್ನೋತ್ತರ ವೇಳೆ ಮುಗಿಯಿತು. ಇವೊತ್ತು ಉಳಿದಿರುವ ಪ್ರಶ್ನೆಗಳನ್ನು ನಾನು ಮುಂದಿನ ವಾರದಲ್ಲಿ ತೆಗೆದುಕೊಳ್ಳುತ್ತೇನೆ.

ಅ) ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು

ಶ್ರೀ ಡಿ.ಎ. ಚಂದ್ರೇಗೌಡ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು): ಅಧ್ಯಕ್ಷರೇ, ದಿನಾಂಕ 24-07-2002ರ ಲಿಖಿತ ಮೂಲಕ ಉತ್ತರಿಸುವ 128 ಪ್ರಶ್ನೆಗಳ ಪೈಕಿ 105 ಪ್ರಶ್ನೆಗಳಿಗೆ ಉತ್ತರಗಳನ್ನು ಸದನದಲ್ಲಿ ಮಂಡಿಸುತ್ತಿದ್ದೇನೆ.

ಅಧ್ಯಕ್ಷರು : ಮಂಡಿಸಲಾಗಿದೆ. ಅನುಬಂಧ-1 ಇನ್ನು ಮುಂದೆ ಶೂನ್ಯ ವೇಳೆ.

ಶ್ರೀ ಎ.ರಾಮದಾಸ್ : ಅಧ್ಯಕ್ಷರೆ, ಇವೊತ್ತು ಆರೇ ಪ್ರಶ್ನೆ ಆಗಿದ್ದು.

ಅಧ್ಯಕ್ಷರು : ನಾನೇನೂ ಮಾಡುವುದಕ್ಕೆ ಆಗುವುದಿಲ್ಲ. You are a witness to my helplessness. ಆದರೆ ಲ್ಯಾಪ್ಸಾಗುವುದಿಲ್ಲ, ಮುಂದಿನ ವಾರದಲ್ಲಿ ತೆಗೆದುಕೊಳ್ಳುತ್ತೇವೆ. ಎದ್ದು ನಿಂತುಕೊಳ್ಳುವ 30-40 ಜನ ನಿಮ್ಮಷ್ಟೇಹಿತರಿದ್ದಾರಲ್ಲಾ ಅವರು ಇದನ್ನು ಅರ್ಥ ಮಾಡಿಕೊಳ್ಳಬೇಕು. ಲ್ಯಾಪ್ಸಾಗುವುದಿಲ್ಲ ದೇವು.

3. ಅಧ್ಯಕ್ಷರ ಅಪ್ಪಣೆ ಮೇರೆಗೆ ಶೂನ್ಯ ವೇಳೆಯಲ್ಲಿ ಪ್ರಸ್ತಾಪಿಸಿದ ವಿಷಯಗಳು :

ವಿಷಯ : ನಾಗರಹೊಳೆ ಅಭಯಾರಣ್ಯದ ಸಮೀಪದ ವೀರನ ಹೊನ್ನಳ್ಳಿ ಎಂಬ ಅರಣ್ಯದ ವ್ಯಾಪ್ತಿಯಲ್ಲಿ ಬೆಳೆದು ನಿಂತಿರುವ ಶ್ರೀಗಂಧ ಮತ್ತು ತೇಗದ ಮರಗಳನ್ನು ಕಡಿದು ಸಾಗಿಸುತ್ತಿರುವ ಬಗ್ಗೆ.

ಶ್ರೀ ಹೆಚ್.ಪಿ. ಮಹದೇವ ಪ್ರಸಾದ್ (ಗುಂಡ್ಲುಪೇಡೆ) : ಅಧ್ಯಕ್ಷರೇ, ನಾನು ಮಾನ್ಯ ಅರಣ್ಯ ಸಚಿವರ ಗಮನ ಸೆಳೆಯುತ್ತೇನೆ. ನಾಗರ ಹೊಳೆ ಅರಣ್ಯಪ್ರದೇಶ, ಅಭಯಾರಣ್ಯ ಇತ್ತೀಚೆಗೆ ನಾನಾ ರೀತಿಯಲ್ಲಿ ಸುದ್ದಿಯಲ್ಲಿದೆ.

ಅಧ್ಯಕ್ಷರು : ಸದನದಲ್ಲಿ ನಿಂತಿರುವ ಸದಸ್ಯರು ಪರಸ್ಪರ ಮಾತನಾಡಬೇಕಾದರೆ ಲಾಬಿಗೆ ಹೋಗಿ ಮಾತನಾಡಿ.

ಶ್ರೀ ಎ.ರಾಮದಾಸ್ : ನಾವು ಗಮನ ಸೆಳೆಯುವ ಸೂಚನೆ ಕೊಟ್ಟಿದ್ದು ತಾವು ನಿನ್ನೇ ಇವತ್ತು ಆಡ್ಮಿಟ್ ಮಾಡುತ್ತೇನೆ ಎಂದಿರಿ.

⊗ ಅನುಬಂಧ (1)

ಅಧ್ಯಕ್ಷರು : ನೀವೂ ಮಾತನಾಡಿ ತಪ್ಪೇನಿದೆ? ನಿಮಗೆ ಐದು ನಿಮಿಷ ಟೈಂ ಕೊಡುತ್ತೇನೆ. ರಾಮದಾಸ್‌ರವರೇ ನೀವು ನನ್ನ ಚೇಂಬರ್‌ಗೆ ಬನ್ನಿ ಮಾತನಾಡೋಣ. ಕಾಲಿಂಗ್ ಅಟೆನ್‌ಷನ್ ಬಂದಾಗ ಇನ್ನೊಂದು ಸಲ ತೆಗೆದುಕೊಳ್ಳೋಣ ಬಿಡಿ.

† ಶ್ರೀ ಪಿ.ಜಿ.ಆರ್. ಸಿಂಧ್ಯ (ಕನಕಪುರ) : ಅಧ್ಯಕ್ಷರೇ, ಇಲ್ಲಿ ಸ್ವಲ್ಪ ಗೊಂದಲವಿದೆ. ನಾನು ಮಹಾದೇವ ಪ್ರಸಾದ್ ಮತ್ತು ಬಚ್ಚೇಗೌಡರು ತಮಗೆ ಪತ್ರ ಬರೆದು ನಾಗರಹೊಳೆಯಲ್ಲಿ ಯಾವರೀತಿ ಶ್ರೀಗಂಧದ ಮರಗಳು ಹಾಳಾಗಿ ಹೋಗುತ್ತಿವೆ ಎಂಬ ಬಗ್ಗೆ. ನಿನ್ನೆ ಪತ್ರಿಕೆಯಲ್ಲೂ ಸಂಪೂರ್ಣವಾಗಿ ವರದಿಯಾಗಿದೆ. ಮಾನ್ಯ ಅರಣ್ಯ ಸಚಿವರ ಗಮನಕ್ಕೆ ಇದು ಸರ್ಕಾರದ ಸಂಪತ್ತಾಗಿರುವುದರಿಂದ ತರಬೇಕಾಗಿದೆ. ಸಂಬಂಧಪಟ್ಟ ಅಧಿಕಾರಿಗಳು ಯಾರನ್ನು ಕಾಯುತ್ತಿದ್ದಾರೆ? ಶ್ರೀಗಂಧದ ಮರಗಳನ್ನು ಕಾಯುತ್ತಿದ್ದಾರೋ? ಕಳ್ಳರನ್ನು ಕಾಯುತ್ತಿದ್ದಾರೋ? ಅಥವಾ ಅವರೇ ಕಳ್ಳತನಕ್ಕೆ ಷಾಮೀಲಾಗಿದ್ದಾರೋ ಎಂಬ ಬಗ್ಗೆ ನಮಗಿರುವ ಮಾಹಿತಿಯನ್ನು ತಿಳಿಸಬೇಕಾಗಿದೆ. ನಮ್ಮ ನಿಯಮಾವಳಿ ಪ್ರಕಾರ ಶೂನ್ಯ ವೇಳೆಯಲ್ಲಿ ಅವರು ಹೇಳುತ್ತಿರುವುದು ಏಪ್ರಿಲ್ 25ನೇ ತಾರೀಖು ನಡೆದ ಘಟನೆಗಳ ಬಗ್ಗೆ ಪ್ರಸ್ತಾಪ ಮಾಡಲಿಕ್ಕೆ ಕಾಲಿಂಗ್ ಅಟೆನ್‌ಷನ್ ಕಳುಹಿಸಿದ್ದಾರೆ. ಅದು ಕಾರ್ಯಕ್ರಮದ ಪಟ್ಟಿ ಪ್ರಕಾರ ಅಧ್ಯಕ್ಷರು ಶುಕ್ರವಾರ ಅದನ್ನು ಇಟ್ಟಿದ್ದಾರೆ, ಅದು ಆಗುತ್ತದೆ. ಇದು ಮೊನ್ನೆ ನಡೆದಿರುವ ಘಟನೆ. ಇದರ ಬಗ್ಗೆ ಶೂನ್ಯ ವೇಳೆಯಲ್ಲಿ ನಾವು ಅಧ್ಯಕ್ಷರ ಅನುಮತಿ ಪಡೆದು ಮಾತನಾಡುತ್ತಿದ್ದೇವೆ.

ಶ್ರೀ ಹೆಚ್.ಎಸ್. ಮಹಾದೇವ ಪ್ರಸಾದ್ : ಅಧ್ಯಕ್ಷರೇ....

ಅಧ್ಯಕ್ಷರು : ಮಾನ್ಯ ಅರಣ್ಯ ಸಚಿವರು ಇದರ ಬಗ್ಗೆ ಏನಾದರೂ ಹೇಳುವುದಿದೆಯೇ?

ಶ್ರೀ ಪಿ.ಜಿ.ಆರ್. ಸಿಂಧ್ಯಾ : ಉತ್ತರ ಕೊಡುವುದಕ್ಕೆ ತಯಾರಿದ್ದೀರಾ ಎಂದು ನಾನು ಕೇಳಿದ್ದು. ಶೂನ್ಯ ವೇಳೆಯಲ್ಲಿ ಸರ್ಕಾರದ ಗಮನಕ್ಕೆ ತರುವುದು ನಮ್ಮ ಕರ್ತವ್ಯ. ಉತ್ತರ ಕೊಡುವುದು ಬಿಡುವುದು ಅದನ್ನು ಬಚ್ಚಿಟ್ಟು ಕೊಳ್ಳುವುದು ಸರ್ಕಾರಕ್ಕೆ ಸಂಬಂಧಿಸಿದ್ದು.

ಶ್ರೀ ಹೆಚ್.ಎಸ್. ಮಹಾದೇವ ಪ್ರಸಾದ್ : ಮಾನ್ಯ ಅಧ್ಯಕ್ಷರೆ, ಇತ್ತೀಚೆಗೆ ನಾಗರಹೊಳೆ ಅಭಯಾರಣ್ಯ ನಾನಾ ರೀತಿಯಿಂದ ಸುದ್ದಿಯಲ್ಲಿದೆ. ದಿನಾಂಕ 15-3-02ರಲ್ಲಿ ಸುಮಾರು 643 ಹೆಕ್ಟೇರ್ ಪ್ರದೇಶದಲ್ಲಿ ಬೆಂಕಿ ಕಾಣಿಸಿಕೊಂಡು ಒಂದು ಘಟನೆ ನಡೆಯಿತು. ಆದಾದಮೇಲೆ ದಿನಾಂಕ 25-4-2000 ರಲ್ಲಿ ಮಾನ್ಯ ಹಿರಿಯ ಸಚಿವರು ಅರಣ್ಯದಲ್ಲಿ ತಂಗಿದ್ದಾಗ ಹೋದಂತಹ ಪತ್ರಕರ್ತರಿಗೆ, ಅವರ ಮೇಲೆ ಕೇಸನ್ನು ಬುಕ್ ಮಾಡಿ ಅವರ ಕ್ಯಾಮೆರಾ ವೆಹಿಕಲ್ಸ್‌ನ್ನು ಸೀಜ್ ಮಾಡಿದ್ದು ಸುದ್ದಿಯಾಯಿತು. ಇತ್ತೀಚೆಗೆ ನಿನ್ನೆ, ನಾಗರಹೊಳೆ ಪ್ರದೇಶದಲ್ಲಿ ಸಾವಿರಾರು ಶ್ರೀಗಂಧದ

ಮರಗಳನ್ನು ವ್ಯವಸ್ಥಿತವಾಗಿ ಕಡಿದು ಅದೇ ಜಾಗದಲ್ಲಿ ಮರದ ಸಿಪ್ಪೆ ಮತ್ತು ಬೇರುಗಳನ್ನು ಪ್ರತ್ಯೇಕ ಮಾಡಿ ಅಲ್ಲೇ ಅದನ್ನು ಮಾರಾಟ ಮಾಡುವುದಕ್ಕೆ ಬೇಕಾದ ಸಿದ್ಧತೆ ಮಾಡಿಕೊಂಡು ಸಾಗಿಸುತ್ತಿರುವಂತಹ ವಿಚಾರ ನಿನ್ನೆ ಇವತ್ತಿನ ಪತ್ರಿಕೆಗಳಲ್ಲೂ ಮೈಸೂರಿನಲ್ಲಿ ವರದಿಯಾಗಿದೆ. ಇದೇ ರೀತಿ ತೇಗದ ಮರಗಳನ್ನೂ ದಿನನಿತ್ಯ ಸಾಗಿಸುತ್ತಿದ್ದಾರೆ. ಈ ವಿಚಾರದಲ್ಲಿ ಅಲ್ಲಿನ ಹುಣಸೂರು ವೈಲ್ಡ್‌ಲೈಫ್ ಡಿಎಫ್‌ಓ ಅವರನ್ನು ಒಬ್ಬ ವರದಿಗಾರ ಈ ರೀತಿ ಅಲ್ಲಿ ಅರಣ್ಯದ ಲೂಟಿ ನಡೆಯುತ್ತಿದೆ ಎಂಬ ವಿಚಾರವನ್ನು ಅವರ ಗಮನಕ್ಕೆ ತರಲಿಕ್ಕೆ ಹೋದಾಗ ನೀವ್ಯಾಕ್ರಿ ಅಲ್ಲಿಗೆ ಹೋಗಿದ್ದಿರಿ? ಇದು ನಿಷಿದ್ಧ ಕಾಡು, ನಿಮಗೆ ಫೋಟೊ ತೆಗೆಯಲು ಅನುಮತಿ ಕೊಟ್ಟವರ್ಯಾರು, ನಿಮ್ಮ ಮೇಲೆ ಕ್ರಿಮಿನಲ್ ಕೇಸ್ ಹಾಕುತ್ತೇವೆಂದು ಹೆದರಿಸಿ ಒಂದು ಭಯದ ವಾತಾವರಣವನ್ನು ಕೂಡ ನಿರ್ಮಾಣ ಮಾಡಿದ್ದಾರೆ. ಈ ರೀತಿಯಲ್ಲಿ ನಾನಾ ಘಟನೆಗಳು ನಡೆಯುತ್ತಿದ್ದರೂ ಸರ್ಕಾರ ಯಾವ ಕ್ರಮವನ್ನೂ ಕೈಗೊಂಡಿಲ್ಲ. ನಿನ್ನೆ ನಾಗರಹೊಳೆ ಅರಣ್ಯದಲ್ಲಿ ಹುಣಸೂರು ತಾಲ್ಲೂಕು ಅನಗೊಡು ಹೋಬಳಿ ವ್ಯಾಪ್ತಿಯ ಬ್ರಹ್ಮಗಿರಿ ಪ್ರದೇಶದಲ್ಲಿ ಲೂಟಿ ನಿರಂತರವಾಗಿ ನಡೆಯುತ್ತಾ ಇದೆ. ಅಲ್ಲಿಯ ರಸ್ತೆ ಮಾರ್ಗಗಳು ನೋಡಿದಾಗ ನಿರಂತರವಾಗಿ ಅಲ್ಲಿ ತೇಗ ಬೇಟೆ ಮರಗಳನ್ನು ಮರಳುಗಾಡು ಕೆರೆ ಪ್ರದೇಶಗಳಲ್ಲಿ ಹೂತಿಟ್ಟು ಅನಂತರ ಹೊರಗಡೆ ವ್ಯಾಪಾರಕ್ಕೆ ಸಾಗಿಸುವ ವ್ಯವಸ್ಥೆ ನಡೆಯುತ್ತಿದೆ. ಇಷ್ಟೆಲ್ಲ ಅಲ್ಲಿ ನಡೆಯುತ್ತಿದೆ ಜೊತೆಗೆ ಯಾರೇ ಪ್ರವಾಸಿಗರು ಅಲ್ಲಿಗೆ ಹೋದಾಗ ಅಲ್ಲಿನ ಡಿಎಫ್‌ಓ ಅವರ ವರ್ತನೆ ಜನರ ಮನಸ್ಸಿಗೆ ನೋವುಂಟುಮಾಡುವಂತ ಪರಿಸ್ಥಿತಿ, ಅವರಿಗೆ ಅನಾವಶ್ಯಕವಾಗಿ ಹೆರಾಸ್ ಮಾಡುವ ಕೆಲಸ ಕೂಡ ನಡೆಯುತ್ತಾ ಇದೆ. ಈಟಿವಿ ವರದಿಗಾರ ಅಲ್ಲಿಗೆ ಹೋದಂತಹ ಸಂದರ್ಭದಲ್ಲಿ ಅವರ ಮೇಲೆ ಕೇಸು ದಾಖಲಿಸಿ ಅವರ ವಹಿಕಲ್ ಮತ್ತು ಟಿ.ವಿ. ಕ್ಯಾಮೆರಾ ರಿಲೀಸ್ ಮಾಡಿಕೊಡಬೇಕೆಂದು ಆದೇಶವಿದ್ದರೂ ಕೂಡ ಇವತ್ತಿನವರೆಗೂ ಬಿಡುಗಡೆ ಮಾಡದೇನೆ ಅವರದೇ ಆದ ದಾಟಿಯಲ್ಲಿ ಮೈಸೂರಿನ ಹೆಸರಾಂತ ಪತ್ರಿಕೆಯಲ್ಲಿ ಒಂದು ಪುಟದ ಆರ್ಟಿಕಲ್ ಬರೆಯುತ್ತಾರೆ. ನಾಗರಹೊಳೆ ಮಹಾರಾಜನ ವರ್ತನೆ ಬದಲಾಗಲಿ ಎಂದು ವರದಿಯಾಗಿದೆ. ಈ ರೀತಿ ಆ ಒಂದು ನಾಗರಹೊಳೆಗೆ ಮಹಾರಾಜನ ರೀತಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಡಿಎಫ್‌ಓ ವರ್ತನೆ ಹಾಗೂ ಅದಕ ಹಿನ್ನೆಲೆಯ 8 ಪ್ರಕರಣಗಳು ನನ್ನ ಮುಂದಿವೆ. ಅವನ್ನು ಬೇಕಾದರೆ ಮಾನ್ಯ ಅರಣ್ಯ ಸಚಿವರಿಗೆ ಕಳುಹಿಸಿಕೊಡುತ್ತೇನೆ. ಈ ವಿಚಾರವನ್ನು ಸರ್ಕಾರ ಸ್ಪಷ್ಟ ಉತ್ತರ ನೀಡಬೇಕು.

†ಶ್ರೀ ಬಿ.ಎನ್. ಬಚ್ಚೇಗೌಡ (ಹೊಸಕೋಟೆ) : ಅಧ್ಯಕ್ಷರೇ, ನಾಗರಹೊಳೆ ಅರಣ್ಯದಲ್ಲಿ ಶ್ರೀಗಂಧದ ಮರಗಳ ಮಾರಣಹೋಮ ಎಂದು ಓದಿದ್ದೆವು. ಇವತ್ತು ಅರಣ್ಯದಲ್ಲಿ ದಿನನಿತ್ಯ ಅರಣ್ಯಸಂಪತ್ತನ್ನು ತೆಗೆದುಕೊಂಡು ಹೋಗುವಂತಹ ಅಂಡರ್‌ವರ್ಲ್ಡ್‌ಗಳಿಂದ ಲೂಟಿ ನಡೆಯುತ್ತಿದೆ. ಬಯಲುಸೀಮೆಯಲ್ಲಿದ್ದ ಗಂಧದ ಮರಗಳೆಲ್ಲಾ ಹೋದವು. ರಾತ್ರೋರಾತ್ರಿ ಮಂತ್ರಿಗಳ ಬಂಗಲೆಯಲ್ಲಿದ್ದುದ್ದನ್ನೂ ಕೊಯ್ದು ತೆಗೆದುಕೊಂಡು ಹೋಗಿದ್ದನ್ನು ನಾವು ನೋಡಿದ್ದೇವೆ. ಅದೇ ರೀತಿ ಅರಣ್ಯದೊಳಕ್ಕೆ ಹೋಗಿ ಅಲ್ಲಿನ ಅಧಿಕಾರಿಗಳೊಡನೆ ಷಾಮೀಲಾಗಿ ಆ ಮರ ಸಾಗಿಸುವ ವ್ಯವಸ್ಥೆ ಮಾಡಿಕೊಂಡಿರುವ ಒಂದು ದೊಡ್ಡ ನೆಟ್‌ವರ್ಕ್ ಇದೆ ಇದರಲ್ಲಿ.

12.30 ಪಿಎಂ

ಅದನ್ನು ಇವತ್ತು ಸರ್ಕಾರ ಭೇದಿಸಿ ಮತ್ತು ಅಧಿಕಾರಿಗಳೂ ಕೂಡ ಅದರ ಬಗ್ಗೆ ತೀವ್ರವಾಗಿ ಪ್ರಯತ್ನವನ್ನು ಮಾಡಬೇಕು. ಇವತ್ತು ಲಕ್ಷಾಂತರ ಕೋಟ್ಯಾಂತರ ರೂಪಾಯಿಗಳ ಬೆಲೆ ಬಾಳುವ

ಗಂಧದ ಮರಗಳನ್ನು ಲೂಟಿ ಮಾಡಿತಕ್ಕಂಥದ್ದು. ಆದಾದ ನಂತರ ತೇಗದ ಮರಗಳನ್ನು ಉರುಳಿಸಿ ಅವರಿಗೆ ಬೇಕಾದ ಜಾಗಗಳಲ್ಲಿ ಸಾಗಿಸುವ ವ್ಯವಸ್ಥೆ ಕೂಡ ನಡೆಯುತ್ತಿದೆ. ಸಾವಿರಾರು ಎಕರೆಯಲ್ಲಿ ಈ ಕಾರ್ಯಗಳು ನಿರಂತರವಾಗಿ ನಡೆಯುತ್ತಿದೆ. ಇವುಗಳನ್ನು ಅಲ್ಲಿರುವ ಅಧಿಕಾರಿಗಳು, ಅದನ್ನು ರಕ್ಷಣೆ ಮಾಡತಕ್ಕಂಥವರು ನಿಯಂತ್ರಿಸಬೇಕಾಗುತ್ತದೆ. ಇದರ ಜೊತೆಯಲ್ಲಿ ಅಲ್ಲಿರುವ ವನ್ಯಜೀವಿಗಳು ಏನು ಇವೆ, ಅವುಗಳನ್ನೂ ಕೂಡ ನಿರಂತರವಾಗಿ ಹೊಡೆಯುತ್ತಿದ್ದಾರೆ. ಇವತ್ತು ದಂತಕ್ಕೋಸ್ಕರ ಆನೆಗಳನ್ನು ಹೊಡೆಯತಕ್ಕಂಥದ್ದು, ಆ ದಂತವನ್ನು ಬಳಸಬಾರದೆಂದು ಕಾನೂನು ಕೂಡ ಇದೆ. ನಿರಂತರವಾಗಿ ದಂತಕ್ಕೋಸ್ಕರ ಆನೆಗಳನ್ನು ಹೊಡೆಯತಕ್ಕಂಥದ್ದು ಇವತ್ತು ನಡೆಯುತ್ತಲೇ ಬಂದಿದೆ. ಅದೇ ರೀತಿ ಕೂಡ ಅಲ್ಲಿರುವ ವನ್ಯಜೀವಿಗಳನ್ನು ನಿರಂತರವಾಗಿ ಹೊಡೆದು ಅವುಗಳನ್ನು ಉಪಯೋಗಿಸುವಂಥದ್ದೂ ಕೂಡ ನಡೆಯುತ್ತಿದೆ. ಇದರ ಬಗ್ಗೆ ಎಲ್ಲಾ ಇತ್ತೀಚೆಗೆ ಪತ್ರಿಕೆಗಳಲ್ಲಿ ನಾವು ನೋಡಿದ್ದೇವೆ. ಸಾಕಷ್ಟು ಚರ್ಮಗಳನ್ನು ಹೊರ ರಾಷ್ಟ್ರಗಳಿಗೆ, ಹೊರ ರಾಜ್ಯಗಳಿಗೆ ಕಳುಹಿಸುವಂಥ ಪ್ರಯತ್ನಗಳೂ ಕೂಡ ನಡೆಯುತ್ತಿವೆ. ಅವುಗಳು ಹಾವಿನ ಚರ್ಮ ಇರಬಹುದು, ಉಡ ಇರಬಹುದು, ಜಿಂಕೆ ಇರಬಹುದು, ಚಿರತೆ ಚರ್ಮ ಇರಬಹುದು, ಇವುಗಳೆಲ್ಲಾ ಅವಿರತವಾಗಿ ನಡೆದುಕೊಂಡು ಹೋಗುತ್ತಿರುವಂಥದ್ದು ಇವತ್ತು ನಡೆಯುತ್ತಿದೆ. ನಾನು ಮಾನ್ಯ ಸಚಿವರಲ್ಲಿ ಕೇಳುತ್ತೇನೆ, ಅಲ್ಲಿರುವ ಸಿಬ್ಬಂದಿ ಅಥವಾ ಅರಣ್ಯ ರಕ್ಷಕರೇನು ಇದ್ದಾರೆ, ಅವರಿಗೆ ಅತ್ಯಾಧುನಿಕವಾದ ಉಪಕರಣಗಳನ್ನು ಕೊಟ್ಟಿಲ್ಲ. ಇವತ್ತು ಕಂಡಲ್ಲೇ ಗುಂಡು ಹೊಡೆಯುವ ಒಂದು ಪ್ರಯತ್ನವಾಗಲಿ, ಯಾವ ಪ್ರಯತ್ನಗಳೇ ಆಗಲಿ, ಇದುವರೆಗೂ ಆಗಿಲ್ಲ. ಮತ್ತು ಈಗ ಅವರಲ್ಲಿರುವ ಬಂದೂಕುಗಳು, ಮದ್ದು ಗುಂಡುಗಳು ಸರಿಯಾಗಿ ಕೆಲಸ ಮಾಡುತ್ತವೆಯೋ ಇಲ್ಲವೋ ಗೊತ್ತಿಲ್ಲ. ಜೊತೆಗೆ ಅಲ್ಲಿನ ವಾಕಿ ಟಾಕಿ ವ್ಯವಸ್ಥೆ ಇವತ್ತು ಇನ್‌ಫರ್ಮೇಷನ್ ಸೇಕ್ ಏನು ಅರಣ್ಯಗಳಲ್ಲಿ ಆಗುತ್ತದೆ, ಅಥವಾ ಜಟ್‌ಸ್ಪೈಡ್ ಜಟ್‌ಸ್ಕಟ್ರ್ಸ್‌ಗಳಲ್ಲಿ ಏನಾಗುತ್ತದೆ, ಆ ರೀತಿ ಮಾಹಿತಿಗಳನ್ನು ಕೊಡುವ ಒಂದು ಲೇಟಸ್ಟ್ ವಿಧಾನಗಳನ್ನು ಅಳವಡಿಸಿಕೊಂಡು ಅದನ್ನು ತಿಳಿದುಕೊಳ್ಳುವ ಹಾಗೆ ಮಾಡಿ ಅವರನ್ನು ಹಿಡಿಯುವಂಥದ್ದು. ದೊಡ್ಡ ಒಂದು ದಂದೆಯೇ ನಡೆಯುತ್ತಿರುವುದನ್ನು ಎಲ್ಲಾ ಅರಣ್ಯ ಪ್ರದೇಶಗಳಲ್ಲೂ ಕಾಣುತ್ತಿದ್ದೇವೆ. ಮಾನ್ಯ ಸಚಿವರು ಬಹಳ ಗಡಸು ಮನೋಭಾವದವರು. ಅವರ ಕಾಲದಲ್ಲಿ ಏನಾದರೂ ಆಗಬೇಕು. ಅವರನ್ನು ಬಲಿ ಹಾಕುವಂಥ ಪ್ರಯತ್ನವಾಗಬೇಕು. ಅರಣ್ಯಾಧಿಕಾರಿಗಳು ಶಾಮೀಲಾಗದಿದ್ದರೆ ಅರಣ್ಯ ಲೂಟಿ ಆಗಲಿಕ್ಕೆ ಸಾಧ್ಯವೇ ಇಲ್ಲ. ಇವತ್ತು ನಾವು ನೋಡಿದ್ದೇವೆ, ನಮ್ಮಲ್ಲಿರುವ ಸಂಪೂರ್ಣ ಅರಣ್ಯ ಏನು ಇವೆ, ನಮ್ಮಲ್ಲಿರುವ ನೀಲಗಿರಿ ಮರ ಏನು ಇದೆ, ಅವುಗಳು ಸಾಕಷ್ಟು ಆಚೆಗೆ ಹೋಗುತ್ತಲೇ ಇರುತ್ತದೆ. ನಮ್ಮಲ್ಲಿ ಬೇಕಾದಷ್ಟು ಅಧಿಕಾರಿಗಳು ಇದ್ದಾರೆ, ಕಾವಲುಗಾರರೂ ಇದ್ದಾರೆ. ಆದರೂ ಅವುಗಳನ್ನು ನಿಯಂತ್ರಿಸಲು ಆಗುತ್ತಿಲ್ಲ. ಇವತ್ತೇನು ಅರಣ್ಯ ಲೂಟಿಯಾಗುತ್ತದೆ, ಅದರ ಬಗ್ಗೆ ಸಾಕಷ್ಟು ನಿಯಂತ್ರಿಸಲು ಆಗುತ್ತಿಲ್ಲ. ಇವತ್ತೇನು ಅರಣ್ಯ ಲೂಟಿಯಾಗುತ್ತದೆ, ಅದರ ಬಗ್ಗೆ ಸಾಕಷ್ಟು ಪ್ರಯತ್ನಮಾಡಿ ಕಳ್ಳರನ್ನು ಹಿಡಿಯುವಂಥ ಪ್ರಯತ್ನವಾಗಬೇಕು. ಬ್ರಹ್ಮಗಿರಿಯಲ್ಲಿ ಆದಂಥ ಲೂಟಿ, ಮತ್ತು ನಾಗರಹೊಳೆಯಲ್ಲಿ ಆಗಿರುವಂಥ ಲೂಟಿ ಇವುಗಳ ಬಗ್ಗೆ ಅಧಿಕಾರಿಗಳಿಂದ ನಿರ್ಲಕ್ಷ್ಯವಾಗಿದೆಯೇ, ಇದರ ಬಗ್ಗೆ ಏನು ಎಂದು ಸೂಕ್ತ ತನಿಖೆಯಾಗಬೇಕು.

† ಶ್ರೀ ಎ.ಆರ್. ಕೃಷ್ಣಮೂರ್ತಿ (ಸಂತೇಮರಳ್ಳಿ) : ಮಾನ್ಯ ಅಧ್ಯಕ್ಷರೇ, ರಾಜ್ಯದಲ್ಲಿರುವ ದಟ್ಟವಾಗಿರತಕ್ಕ ಅರಣ್ಯ ಇವತ್ತಿನ ದಿವಸ ನಶಿಸಿಹೋಗುತ್ತಿದೆ. ಈಗ ತಾನೇ ಸದಸ್ಯರುಗಳಾದ

ಶ್ರೀಮಾನ್ ಮಹದೇವಪ್ರಸಾದ್‌ರವರು ಮತ್ತು ಬಚ್ಚೇಗೌಡರು ಕೂಡ ಸವಿಸ್ತಾರವಾಗಿ ಈ ವಿಷಯವನ್ನು ಪ್ರಸ್ತಾಪಮಾಡಿದ್ದಾರೆ. ದಿನನಿತ್ಯ ಕಾಡಿನಲ್ಲಿರುವ ಪ್ರಾಣಿಗಳೇನು ಇವೆ. ಆನೆ ಇರಬಹುದು, ಜಿಂಕೆ ಇರಬಹುದು, ಮೊನ್ನೆ ಹುಲಿಯನ್ನು ಕೂಡ ಮಧ್ಯಪ್ರದೇಶದಿಂದ ಬಂದಿರುವ ಜಬಲ್‌ಪುರದ ಕೆಲವರು ಅರಣ್ಯಕ್ಕೆ ನುಗ್ಗಿ ಈ ಹುಲಿಗಳನ್ನು ಕೂಡ ಜಾಕ್‌ಟ್ರಾಪ್ ಮುಖಾಂತರ ಹಿಡಿಯಬೇಕೆಂದು ಹೇಳಿ ಕಾಡಿನೊಳಗೆ ನುಸುಳಿ ಹೋಗಿರುವ ಸಂದರ್ಭದಲ್ಲಿ ಈಗಾಗಲೇ ಅರಣ್ಯ ಇಲಾಖೆಯವರು ಇವತ್ತಿನ ದಿವಸ ಆ ವಿಚಾರದಲ್ಲಿ ಆ ಪ್ರದೇಶದಲ್ಲಿ ಯಾರು ಈ ರೀತಿ ನುಸುಳಿದರು, ಜಬಲ್‌ಪುರದಿಂದ ಬಂದಿರುವ ಬೇಟೆಗಾರರನ್ನೆಲ್ಲಾ ಬಂಧಿಸಿರುವ ಉದಾಹರಣೆಗಳೆಲ್ಲಾ ಕೂಡ ಇವೆ. ಇದು ಒಂದು ಕಡೆಯಾದರೆ ಇನ್ನೊಂದು ಕಡೆ ಏನಾಗಿದೆ ಎಂದರೆ ಅರಣ್ಯದಲ್ಲಿ ಬಹಳ ಬೆಲೆ ಬಾಳುವ ಮರಗಳು ಕೂಡ ಅರಣ್ಯದಲ್ಲಿ ನಶಿಸಿ ಹೋಗುತ್ತಿರುವುದನ್ನು ನಾವು ಕಾಣುತ್ತಿದ್ದೇವೆ. ನಾಗರಹೊಳೆ ಅರಣ್ಯ ಪ್ರದೇಶಕ್ಕೆ ಸಂಬಂಧಿಸಿದಂತೆ ಮಾನ್ಯ ಮಂತ್ರಿಗಳೂ ಕೂಡ ಚುಕ್ಕೆ ಗುರುತಿನ ಪ್ರಶ್ನೆ 1049 ಕ್ಕೆ ಕೂಡ ಉತ್ತರವನ್ನು ಕೊಟ್ಟಿದ್ದರು. ಅದರಲ್ಲಿ ಸಚಿವರು ನಾಗರಹೊಳೆ ಅಭಯಾರಣ್ಯಕ್ಕೆ ಹೋದಂಥ ಸಂದರ್ಭದಲ್ಲಿ ಛಾಯಾಚಿತ್ರವನ್ನು ತೆಗೆಯುವ ಸಂದರ್ಭದಲ್ಲಿ ನಮ್ಮ ಮಾಧ್ಯಮದ ಸ್ನೇಹಿತರೂ ಕೂಡ ಅಲ್ಲಿಗೆ ಹೋಂದಥ ಸಂದರ್ಭ ಅವರ ಮೇಲೆ ಇಲಾಖೆಯವರು ಕೇಸನ್ನು ಕೂಡ ದಾಖಲು ಮಾಡಿರತಕ್ಕಂಥದ್ದು ಇದೆ. ನನ್ನ ಪ್ರಶ್ನೆ ಏನೆಂದರೆ ಸಚಿವರು ಒಪ್ಪಿಗೆ ತೆಗೆದುಕೊಂಡು ಅಲ್ಲಿ ಛಾಯಾ ಚಿತ್ರ ತೆಗೆಯುವುದಕ್ಕೆ ಹೋಗಿದ್ದರೂ ಕೂಡ ಇವತ್ತು ಮಾಧ್ಯಮದವರು ಅವರು ಹೋದಂಥ ಸಂದರ್ಭದಲ್ಲಿ ಇವರು ಆಕ್ರಮವಾಗಿ ಪ್ರವೇಶ ಮಾಡಿದ್ದಾರೆಂದು ಕೇಸ್ ದಾಖಲೆಯಾಗಿರುವುದನ್ನು ನಾವು ಕಾಣುತ್ತೇವೆ. ನನ್ನ ಪ್ರಶ್ನೆ ಏನೆಂದರೆ ಇವತ್ತು ಅರಣ್ಯವನ್ನು ಪ್ರವೇಶ ಮಾಡಬೇಕಾದರೆ ಲೇಮ್ಯಾನ್‌ಗೆ ಆ ಕಾಡಿನ ದಾರಿ ಗೊತ್ತಾಗುವುದಿಲ್ಲ. ನನಗೆ ತಿಳಿದಮಟ್ಟಿಗೆ ಪತ್ರಕರ್ತರು ಅವರು ಅಲ್ಲಿರತಕ್ಕ ಎ.ಸಿ.ಎಫ್ ತಿಮ್ಮೇಗೌಡರು ಎಂದು ಯಾರು ಇದ್ದರು, ಅವರ ಒಪ್ಪಿಗೆಯನ್ನು ಪಡೆದು ಅವರೊಬ್ಬರು ಗಾರ್ಡ್‌ನ್ನು ಕಳುಹಿಸಿಕೊಟ್ಟು ಮಂತ್ರಿಗಳು ಇದ್ದ ಕಾಡು ಪ್ರದೇಶಕ್ಕೆ ಕರೆದುಕೊಂಡು ಹೋಗತಕ್ಕ ಅವಕಾಶವನ್ನು ಕಲ್ಪಿಸಿಕೊಟ್ಟ ಹಿನ್ನೆಲೆಯಲ್ಲಿ ಇದು ಯಾವ ರೀತಿ ಆಕ್ರಮ ಪ್ರವೇಶವಾಗುತ್ತದೆ? ಹಾಗಾಗಿ ಈ ವಿಚಾರದಲ್ಲಿ ಮಾನ್ಯ ಮಂತ್ರಿಗಳು ಬಹಳ ಗಂಭೀರವಾಗಿ ಇದರ ಬಗ್ಗೆ ಚಿಂತನೆ ಮಾಡಿ ಪತ್ರಕರ್ತರಿಗೆ ರಕ್ಷಣೆ ಕೊಡತಕ್ಕದ್ದು ಆಗಬೇಕು. ಮತ್ತು ಇನ್ನೊಂದು ಕಡೆ ನಮ್ಮ ಕಾಡಿನ ಜೀವರಾಶಿಯನ್ನು ಉಳಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎ. ರಾಮದಾಸ್ (ಕೃಷ್ಣರಾಜ) : ಮಾನ್ಯ ಅಧ್ಯಕ್ಷರೇ, ಈಗಾಗಲೇ ನಾವು ಗಮನ ಸೆಳೆಯುವ ಸೂಚನೆ ಮೂಲಕ ಕೊಟ್ಟಿದ್ದೆವು, ಆ ಎಲ್ಲಾ ವಿಚಾರಗಳು ಇಲ್ಲೇ ಕವಲ್ ಆಗಿರುವುದರಿಂದ ಗಮನ ಸೆಳೆಯುವ ಸೂಚನೆಯ ಅವಶ್ಯಕತೆ ಇಲ್ಲ ಎಂದು ಹೇಳಿ ಎಲ್ಲಾ ವಿಚಾರಗಳನ್ನು ಇಲ್ಲೇ ಹೇಳುವುದಕ್ಕೆ ಇಚ್ಛಿಪಡುತ್ತೇನೆ. ದಯಮಾಡಿ ಮಾನ್ಯ ಅಧ್ಯಕ್ಷರು ಸಮಯವನ್ನು ಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಪ್ರಮುಖವಾಗಿ ಎಲ್ಲಾ ವಿಚಾರಗಳನ್ನೂ ಮತ್ತು ಪ್ರಮುಖ ಅಂಶಗಳನ್ನು ಸ್ನೇಹಿತರುಗಳು ಹೇಳಿದ್ದಾರೆ. ಇದರಲ್ಲಿ ಪ್ರಮುಖವಾಗಿ ಕ್ಯಾಬಿನೆಟ್‌ನಲ್ಲಿರುವ ಸಚಿವರಲ್ಲಿ ಬಹಳ ನಿಷ್ಪೂರವಾಗಿ ರಾಜ್ಯದ ಬೊಕ್ಕಸವನ್ನು ಉಳಿಸಬೇಕೆನ್ನುವಂಥ ಕಾಳಜಿಯನ್ನು ಇಟ್ಟುಕೊಂಡಿರತಕ್ಕ ಮಂತ್ರಿಗಳು ಈ ಒಂದು ಇಲಾಖೆಯಲ್ಲಿ ಇದ್ದಾರೆ. ಅದು ನಮ್ಮ ಪುಣ್ಯ. ಸರ್ಕಾರದ ಬೊಕ್ಕಸವನ್ನು ಹಾಳು ಮಾಡುವಂಥ ಅಧಿಕಾರಿಗಳು ಹೊರಗಿನ ನೋಟಕ್ಕೆ ತಾವು ಬಹಳ ಪ್ರಾಮಾಣಿಕರು

ಎನ್ನುವಂಥ ರೀತಿಯಲ್ಲಿ ತೋರಿಸಿಕೊಂಡು ಅದರ ರೀತಿಯಲ್ಲೇ ಮಾಧ್ಯಮಗಳ ಮೂಲಕವೂ ಕೂಡ ಎಲ್ಲಾ ವಿಚಾರಗಳನ್ನೂ ಕೊಡುವಂಥದ್ದರ ಮೂಲಕ ಆದರೆ ಅಂಥ ದೊಡ್ಡ ದೊಡ್ಡ ದಂಧೆಗಳು ಏನು ನಡೆಯುತ್ತಿವೆ, ಅದಕ್ಕೆ ಅವರ ಇನ್‌ವಾಲ್ವ್‌ಮೆಂಟ್ ಇದೆ ಎನ್ನುವುದು ಹೊರಗೆ ಬರಬಾರದು ಎನ್ನುವ ದೃಷ್ಟಿಯಲ್ಲಿ ನಡೆಯುತ್ತಿರುವ ಈ ಕೃತ್ಯಗಳ ಬಗ್ಗೆ ಸಚಿವರ ಗಮನಕ್ಕೆ ಬಂದಿದೆ ಎಂದು ನಾನು ತಿಳಿದುಕೊಂಡಿದ್ದೇನೆ. ಪ್ರಮುಖವಾಗಿ ಈ ಒಂದು ನಾಗರಹೊಳೆ ಪ್ರದೇಶದಲ್ಲಿ ಕಳೆದ ಎರಡು ವರ್ಷಗಳಲ್ಲಿ 45 ಆನೆಗಳು ಸತ್ತಿವೆ. ಅದರಲ್ಲಿ ನೀರನ್ನು ಕುಡಿಯಲಿಕ್ಕೆ ಹೋಗಿ ಅದರ ಬದಿಯಲ್ಲಿ ಸತ್ತಿರುವುದು 5 ಆನೆಗಳು ಮಾತ್ರ. ಆದರೆ ಇನ್ನು ಉಳಿದ 40 ಆನೆಗಳೂ ಕೂಡ ಗುಂಡು ಹೊಡೆದು ಸಾಯಿಸಿ ಎಲ್ಲಾ ಉಪಯೋಗವನ್ನು ಅಂದರೆ ಅದನ್ನು ಸಾಯಿಸುವ ಮುಖಾಂತರದಲ್ಲಿ ಆ ದುಷ್ಕೃತ್ಯವನ್ನು ಮಾಡಿರುವುದು ಎಲ್ಲಾ ವರದಿಯಾಗಿದೆ. ಪ್ರಮುಖವಾಗಿ ಈ ಒಂದು ಪ್ರದೇಶದಲ್ಲಿ ಈಗತಾನೇ ವರದಿಯಾದಂತೆ 30 ವರ್ಷ ಒಂದು ಗಂಡಾನೆ ತಾರೆಹಡ್ಲು ಎನ್ನುವ ಒಂದು ಪ್ರದೇಶದಲ್ಲಿ ಆಫೀಸಿನ ಪಕ್ಕದಲ್ಲೇ ಅಂದರೆ ಯಾವ ಫಾರೆಸ್ಟ್ ಡಿಪಾರ್ಟ್‌ಮೆಂಟಿನ ಕಛೇರಿ ಇದೆ, ಅದರ ಪಕ್ಕದಲ್ಲೇ ಕೇವಲ ಒಂದು ಕಿಲೋ ಮೀಟರ್ ದೂರದಲ್ಲಿ ಅದನ್ನು ಹೊಡೆದು ಉರುಳಿಸಿರುವಂಥದ್ದು. ದಂತಗಳನ್ನೇ ಕಟ್ ಮಾಡಿಕೊಂಡು ಹೋಗಿದ್ದಾರೆ ಎನ್ನುವ ವಿಚಾರಗಳೂ ಕೂಡ ಈಗ ಬೆಳಕಿಗೆ ಬರುತ್ತಿದೆ. ಮತ್ತೊಂದು ಈ ಪ್ರದೇಶದಲ್ಲಿ ಪ್ರಮುಖವಾಗಿ ಈ ಒಂದು ಅರಣ್ಯಪ್ರದೇಶದಲ್ಲಿ 23ನೇ ತಾರೀಖು ಆಗಸ್ಟ್‌ನಲ್ಲಿ ಜಿಂಕೆಗಳನ್ನು ಕೊಂದಿರುವಂಥದ್ದು, ಅದಕ್ಕೆ ಸಂಬಂಧಪಟ್ಟ ಹಾಗೆ ವೆಹಿಕಲ್ಸ್‌ಗಳನ್ನು ಸೀಜ್ ಮಾಡಿದರು. ಆ ರೀತಿ ಸೀಜ್ ಮಾಡತಕ್ಕ ಸಂದರ್ಭದಲ್ಲಿ ಬಹಳ ದೊಡ್ಡ ಈ ಅರಣ್ಯ ಪ್ರದೇಶದಲ್ಲಿ ಬಹಳ ಪ್ರಭಾವಿಯಾದ ರಾಜಕಾರಣವನ್ನು ಹೊಂದಿರುವಂಥ ವ್ಯಕ್ತಿಗಳು ಅದರಲ್ಲಿ ಇನ್‌ವಾಲ್ವ್‌ಮೆಂಟ್ ಇತ್ತೋ ಅವರ ಒಂದು ಜೀಪನ್ನು ಸೀಜ್ ಮಾಡಿದರು. ಯಾವ ಅಧಿಕಾರಿಗಳು ಪ್ರಾಮಾಣಿಕರು ಎಂದು ಹೇಳುತ್ತಾರೋ ಯಾವ ಜೀಪ್‌ನಲ್ಲಿ ಹೋಗಿ ಅದನ್ನು ಕೊಂದಿದ್ದರೋ ಆ ಜೀಪನ್ನು ಬಿಟ್ಟು ಬೇರೆ ಜೀಪಿನ ನಂಬರು ಕೊಡುವ ವ್ಯವಸ್ಥೆಗಳಾಯಿತು. ಇವತ್ತೂ ಕೂಡ ಯಾರು ಜಿಂಕೆಗಳನ್ನು ಅಂದರೆ ಅಧಿಕಾರಿಗಳ ಎದುರುಗಡೆ ಕೊಂದರೋ ಅವರು ಇವತ್ತು ಬಹಳ ಯಶಸ್ವಿಯಾಗಿ ಕಾನೂನಿನಿಂದ ಹೊರಗಡೆ ಬಂದಿದ್ದಾರೆ. ಸನ್ಮಾನ್ಯ ಮಂತ್ರಿಗಳು ಬಹಳ ಯಶಸ್ವಿಯಾಗಿ ಎಲ್ಲವನ್ನೂ ಕೂಡ ನೋಡುತ್ತಿದ್ದಾರೆ. ದಿನಾಂಕ 15-03-2002ರಲ್ಲಿ 643 ಹೆಕ್ಟೇರ್ ಪ್ರದೇಶಕ್ಕೆ ಬೆಂಕಿ ಬಿತ್ತು. ಬೆಂಕಿ ಪಸರಿಸಿ ಆ ಇಡೀ ದಟ್ಟವಾದಂಥ ಅರಣ್ಯದಲ್ಲಿಹಬ್ಬಿ ಅರಣ್ಯವೆಲ್ಲಾ ನಾಶವಾಯಿತು. ಇದಕ್ಕೆ ಸಂಬಂಧಪಟ್ಟ ಹಾಗೆ ಕೆಲಸವು ಪತ್ರಿಕೆಗಳು ಬರೆದಂಥ ಸಂದರ್ಭದಲ್ಲಿ ಉತ್ತರವನ್ನು ಹೇಳಿದರು. ಯಾವುದೇ ರೀತಿಯಾದಂಥ ಲುಕಾಸನು ಅದರಿಂದ ಆಗಿಲ್ಲ, ಇನ್‌ಸಿಡೆಂಟ್ ಆಗಿಲ್ಲ ಎಂದು ಕೆಲವು ಅಧಿಕಾರಿಗಳು ಕೊಟ್ಟರು. ಸನ್ಮಾನ್ಯ ಮಂತ್ರಿಗಳಲ್ಲಿ ನಾನು ಕೇಳುವುದಕ್ಕೆ ಇಚ್ಛಿಪಡುತ್ತೇನೆ, ಇವತ್ತು ಬಹಳವಾಗಿ ನೀವು ಟೆಕ್ನಾಲಜಿಯಲ್ಲಿ ಮುಂದುವರೆದಿದ್ದೀರಿ. ಇವತ್ತು ಸೆಟಲೈಟ್ ಫೋಟೋಸ್ ಇವೆ, ಸೆಟಲೈಟ್ ಫೋಟೋಸ್‌ನಲ್ಲಿ 643 ಹೆಕ್ಟೇರ್ ಪ್ರದೇಶದಲ್ಲಿ ಬೆಂಕಿ ಬಿದ್ದು ಇವತ್ತು ಶೇಕಡ 50 ರಿಂದ 75 ಭಾಗ ಆ ಪ್ರದೇಶದಲ್ಲಿರುವಂಥ ಪ್ರಾಣಿಗಳು ಸತ್ತಿವೆ. ಆ ಪ್ರದೇಶದಲ್ಲಿರುವಂತಹ ಮರ ಗಿಡಗಳು ಸುಟ್ಟು ಹೋಗಿವೆ ಎನ್ನುವ ವಿಚಾರ ಸೆಟಲೈಟ್ ಫೋಟೋದಲ್ಲಿ ಸಿಕ್ಕಿದೆ. ಆ ಸೆಟಲೈಟ್ ಫೋಟೋ ತರಿಸಿಕೊಳ್ಳುವಂತಹ ಕೆಲಸವನ್ನು ಸರ್ಕಾರ ಇದುವರೆಗೆ ಮಾಡಲಿಲ್ಲ. ದಿನಾಂಕ 31.05.2002ರಲ್ಲಿ ಒಂದು ವಿಚಾರ ಪ್ರಸ್ತಾಪ ಆಗಿದೆ.

ಜಾಕ್‌ಟ್ರಾ ್ಯಪ್ ಬಗ್ಗೆ ಒಂದು ದೊಡ್ಡ ಸುದ್ದಿ ಆಯಿತು. ನಾವೆಲ್ಲರೂ ಸಹ ಕುತೂಹಲದಿಂದ ನೋಡುತ್ತಿದ್ದೆವು. ಇದೇನಿದು? ಜಾಕ್‌ಟ್ರಾ ್ಯಪ್ ಎಂದರೆ ಏನು ಎಂದು ಹೇಳಿ ನೋಡುತ್ತಿದ್ದೆವು. ಇದು ವಿಶೇಷವಾಗಿ ಉತ್ತರ ಭಾರತದಲ್ಲಿರುವಂತಹ ಒಂದು ನುರಿತವರು ಫಾರೆಸ್ಟ್‌ನಲ್ಲಿ ಒಳಗಡೆ ನುಗ್ಗಿ ಕಳ್ಳತನ ಮಾಡುವಂತಹ ಶಕ್ತಿ ಇರುವಂಥವರು. ಆ ಜಾಕ್‌ಟ್ರಾ ್ಯಪ್ ಎನ್ನುವಂತಹ ಒಂದು ಯಂತ್ರವನ್ನು ಇಟ್ಟು ಯಾವ ಹುಲಿ ತನಗೆ ಬೇಕಾಗಿರುವಂತಹ ಒಂದು ಆಂಟನ್ನು ತಿನ್ನುತ್ತದೆ, ಆಟನ್ನು ಜಾಕ್‌ಟ್ರಾ ್ಯಪ್ ಯಂತ್ರದ ಮಧ್ಯದಲ್ಲಿ ಇಟ್ಟು ಆ ಕಾಲವನ್ನು ಬಿಗಿ ಮಾಡಿ ಜೀವ ಇದ್ದಾಗಲೇ ಹುಲಿಯನ್ನು ಕೊಂದು ಅದರ ಚರ್ಮವನ್ನು ತೆಗೆಯುವಂತಹ ಕೆಲಸವನ್ನು ಯಶಸ್ವಿಯಾಗಿ ಮಾಡಿಕೊಂಡು ಬರುತ್ತಿದ್ದಾರೆ. ಅಂಥವರು ಯಾರು ಪ್ರಮುಖವಾಗಿ ಇದರ ಹಿಂದುಗಡೆ ಇದ್ದಾರೆ, ಅವರ್‍ಯಾರೂ ಇವತ್ತಿನವರೆಗೆ ಅರೆಸ್ಟ್ ಆಗಿಲ್ಲ. ಕೇವಲ ಅಲ್ಲಿ ಯಾರು ಇದ್ದರು, ಅಲ್ಲಿ ಕೇವಲ ಮಧ್ಯ ಪ್ರದೇಶದ ಕಾಲಾಳುಗಳು ಯಾರ್‍ಯಾರು ಇದ್ದಾರೆ, ಅಂಥವರನ್ನು ಮಾತ್ರ ಇವತ್ತು ಅರೆಸ್ಟ್ ಮಾಡುವಂತಹ ಕೆಲಸ ಆಯಿತು. ಪ್ರಮುಖವಾಗಿ ಈಗ ಅದರ ಪ್ರಕಾರದಲ್ಲಿ ಸುಮಾರು 47 ಅಲೆಮಾರಿಗಳನ್ನು ಬಂಧಿಸಿದರು. ಬಂಧನ ಮಾಡುವಾಗ ಯಾವ ಸನ್ಮಾನ್ಯ ಸಭಾಧ್ಯಕ್ಷರ ಆದೇಶದ ಮೇರೆಗೆ ಕಡತದಿಂದ ತೆಗೆದು ಹಾಕಲಾಗಿದೆ. ಎನ್ನುವಂತಹ ವ್ಯಕ್ತಿ ಇವರನ್ನೆಲ್ಲಾ ಬಂಧನ ಮಾಡಿ ಎಂದು ಪತ್ರಿಕೆಯವರ ಮುಂದೆ ಹೇಳಿಕೆ ಕೊಟ್ಟರು ಆಗ ಇವರಲ್ಲಿರುವಂತಹ ಆಯುಧಗಳನ್ನು ಏನೇನು ಸೀಜ್ ಮಾಡಿದ್ದೇವೆಂದು ಇವತ್ತಿನವರೆಗೆ ಹೇಳಲಿಲ್ಲ. ಅದಿರಲಿ, ಅವರನ್ನು ಬಂಧನ ಮಾಡಿ ಪೊಲೀಸ್‌ನವರಿಗೆ ಕೊಟ್ಟ ನಂತರದಲ್ಲಿ ಜ್ಯುಡಿಷಿಯಲ್ ಕಸ್ಟಡಿಗೆ ಬಂದಾಗ ನೋಡುತ್ತಾರೆ, ಆಗ ಅಲ್ಲಿರುವಂತಹ ಮಕ್ಕಳುಗಳ ಹೊಟ್ಟೆಯಲ್ಲಿ ಮೂರು ಲಕ್ಷ ರೂಪಾಯಿ ಹಣ ಸಿಕ್ಕಿತು ಎಂದು ಹೇಳಿ ಜ್ಯುಡಿಷಿಯಲ್ ಕಸ್ಟಡಿಯಲ್ಲಿ ಗೊತ್ತಾಯಿತು ಹಾಗಾದರೆ ಫಾರೆಸ್ಟ್ ಅಧಿಕಾರಿಗಳು ಅವರನ್ನು ಅರೆಸ್ಟ್ ಮಾಡಿದಾಗ, ಅವರ ಆಯುಧಗಳು ಏನು? ಹಣ ಎಲ್ಲಿತ್ತು? ಹಣದಲ್ಲಿ ಇದ್ದಂತಹ ಚೀಟಿಯಲ್ಲಿ ಯಾರ್‍ಯಾರಿಗೆ ಕಳುಹಿಸಬೇಕು ಎಂಬ ಸಂದೇಶ ಇತ್ತು? ಫೋನ್ ನಂಬರ್ ಯಾವುದು ಇದ್ಯಾವುದೇ ವಿಚಾರಗಳು ಗೊತ್ತಾಗಿರಲಿಲ್ಲವಾ? ಏಕೆ ಈ ವಿಚಾರಗಳನ್ನೆಲ್ಲಾ ಮುಚ್ಚಿಡುವಂತಹ ಕೆಲಸವನ್ನು ಅಧಿಕಾರಿಗಳು ಮಾಡಿದರು ಎನ್ನುವಂತಹ ವಿಚಾರಗಳು ಇವತ್ತು ಪ್ರಮುಖವಾಗಿ ಗೊತ್ತಾಗಬೇಕು. ಮತ್ತೊಂದು ವಿಚಾರ, ಶ್ರೀಮಂಗಲದಲ್ಲಿರುವಂತಹ ಬ್ರಹ್ಮಗಿರಿ ಅರಣ್ಯ ಪ್ರದೇಶದಲ್ಲಿ ಐದು ಕಡೆ ಈ ರೀತಿ ಆಗಿದೆ. ನಾನು ಆಗಲೇ ಹೇಳಿದೆ. ವಿಷಯ ಬಂದಿದ್ದರಿಂದ ನಾನು ಮುಖ್ಯವಾದ ವಿಚಾರಗಳನ್ನು ಹೇಳುತ್ತಿದ್ದೇನೆ.

ಅಧ್ಯಕ್ಷರು : ತಾವು ಕ್ಯಾಮರಾ ಬಗ್ಗೆ ಮಾತ್ರ ಕೇಳಿದ್ದೀರಿ. ನೀವು ಎಲ್ಲೆಲ್ಲೋ ಹೋಗುತ್ತಿದ್ದೀರಿ. ನೀವು ಫಾರೆಸ್ಟ್ ಡಿಪಾರ್ಟ್‌ಮೆಂಟಿನ ವಿಚಾರವನ್ನೇ ಹೇಳುತ್ತಿದ್ದೀರಿ.

ಶ್ರೀ ಎ. ರಾಮದಾಸ್ : ನಾನು ಕೇವಲ ನಾಗರಹೊಳೆಯ ವಿಚಾರ ಮಾತ್ರ ಹೇಳುತ್ತಿದ್ದೇನೆ.

ಅಧ್ಯಕ್ಷರು : ಕ್ಯಾಮರಾ ಸೀಜ್ ಮಾಡಿ ಕೊಂಡಿದ್ದಾರೆ, ಅದನ್ನು ಬಿಡಿಸಿ ಕೊಡಿ ಎಂದು ಅಷ್ಟೇನೆ ತಾವು ಕೇಳಿದ್ದು. ಇಂತಹ ಬುದ್ಧಿವಂತರೇ ಹೀಗೆ ಮಾತನಾಡಿದರೆ ನಾವೇನು ಹೇಳುವುದು?

ಶ್ರೀ ಎ. ರಾಮದಾಸ್ : ಐದು ಪ್ರದೇಶಗಳಲ್ಲಿ ಗಾಂಜಾವನ್ನು ಬೆಳೆಸವಂತಹ ಕೆಲಸವನ್ನು ಅಲ್ಲಿಯ ಅಧಿಕಾರಿಗಳೇ ಮಾಡಿಸುತ್ತಿದ್ದರು. ಯಾರು ಪತ್ರಿಕಾ ಮಾಧ್ಯಮದವರು ಹೋದರು, ಈಟಿವಿ ಮತ್ತು ಇಂಡಿಯನ್ ಎಕ್ಸ್‌ಪ್ರೆಸ್‌ನ ಪ್ರತಿನಿಧಿಗಳು ಅಲ್ಲಿಗೆ ಹೋದಾಗ ಈ ವಿಚಾರಗಳನ್ನೆಲ್ಲಾ ಎಲ್ಲಿ ರೆಕಾರ್ಡ್ ಮಾಡುತ್ತಾರೋ; ಐದು ಪ್ರದೇಶಗಳಲ್ಲಿ ಗಾಂಜಾವನ್ನು ಬೆಳೆಯುವಂತಹ

ವಿಚಾರಗಳು ಎಲ್ಲಿ ಗಮನಕ್ಕೆ ಬರುತ್ತದೋ ಎನ್ನುವಂತಹ ಭಯಲ್ಲಿಅದ್ದಂತಹವರನ್ನು ಕಾಡುತ್ತಿತ್ತು. ಈ ಸಂದರ್ಭದಲ್ಲಿಯೇ ವಿಶೇಷವಾಗಿ ಅದರಲ್ಲಿ ಈಟಿವಿಯ ಅನೂಪ್ ಕುಮಾರ್, ಕೇಶವ ಕುಮಾರ್ ಮತ್ತು ಸುಧೀಂದ್ರ, ಕ್ಯಾಮರಾಮೆನ್ ಮತ್ತು ಸುಧೀರ ರಾಜ್ ಈ ನಾಲ್ಕು ಜನ ಮತ್ತು ಶ್ರೀ ಶಿವಕುಮಾರ್ ಎಂಬುವರು ಇಂಡಿಯನ್ ಎಕ್ಸ್‌ಪ್ರೆಸ್‌ನ ಪ್ರತಿನಿಧಿ ಇದ್ದರು. ಇವರು ಇಷ್ಟೂ ಜನ ಅಲ್ಲಿಗೆ ಹೋಗಿದ್ದಂತಹದ್ದು ರಾಜ್ಯದಲ್ಲಿ ಪೂರ್ತಿ ಬರಗಾಲ ಬಂದಿರುವಂತಹ ಸಂದರ್ಭದಲ್ಲಿ ಗ್ರಾಮೀಣಾಭಿವೃದ್ಧಿ ಸಚಿವರು ಅಲ್ಲಿ ಬಂದು ಬಿಡಾರವನ್ನು ಹೂಡಿದ್ದಾರೆ. ಅವರನ್ನು ರಾಜ್ಯದ ಬರಗಾಲದ ಸ್ಥಿತಿಗಳನ್ನು ಯಾವ ರೀತಿಯಲ್ಲಿ ನಿಭಾಯಿಸುವುದಕ್ಕೆ ಏನು ಕ್ರಮವನ್ನು ಕೈಗೊಂಡಿದ್ದೀರಿ ಎಂದು ಕೇಳುವುದಕ್ಕೆ ಹೋದಂತಹ ಸಂದರ್ಭ. ಅಭಯಾರಣ್ಯಕ್ಕೆ ಹೋಗುವಂತಹ ಸಂದರ್ಭದಲ್ಲಿ ಪ್ರಾರಂಭದಲ್ಲಿ ಹೋಗಿ ಕೇಳಿದಂತಹ ಸಂದರ್ಭದಲ್ಲಿ ಫಾರೆಸ್ಟರ್ ಅವರು ಏನು ಹೇಳಿದರು ಎಂದರೆ ಸನ್ಮಾನ್ಯ ಸಭಾಧ್ಯಕ್ಷರ ಆದೇಶದ ಮೇರೆಗೆ ಕಡತದಿಂದ ತೆಗೆದು ಹಾಕಲಾಗಿದೆ. ಅಧಿಕಾರಿಯ ಪರ್ಮಿಷನ್ ಬೇಕಾಗಿದೆ ಎಂದು ಹೇಳಿದರು. ಪರ್ಮಿಷನ್ ತೆಗೆದುಕೊಳ್ಳುವುದಕ್ಕೋಸ್ಕರವಾಗಿ ವೆರ್‌ಲೆಸ್ ಮೆನೇಜನ್ನು ಕೊಟ್ಟು ಅಲ್ಲಿಯ ಒಬ್ಬ ವ್ಯಕ್ತಿಯ ಜೊತೆಯಲ್ಲಿ, ಗಾರ್ಡನ ಜೊತೆಯಲ್ಲಿ ಇವರನ್ನು ಒಳಗಡೆ ಕಳುಹಿಸಿಕೊಟ್ಟರು. ಅಲ್ಲಿ ಹೋಗಿ ಮೀಟಿಂಗ್ ನಡೆಯುತ್ತಿರುವಂತಹ ಸಂದರ್ಭದಲ್ಲಿ ಅವರನ್ನು ಬರಮಾಡಿಕೊಂಡಂತಹ ಪ್ರತಿನಿಧಿಗಳನ್ನು ಆ ಅಧಿಕಾರಿ ನೀವು ಪರ್ಮಿಷನ್ ತೆಗೆದುಕೊಂಡಿದ್ದೀರಾ ಎಂದು ಕೇಳಿದರು. ಅವರು ಇಲ್ಲ ಎಂದು ಹೇಳಿದರು. ನೀವು ಯಾರನ್ನು ಭೇಟಿ ಮಾಡಲಕ್ಕೋಸ್ಕರವಾಗಿ ಬಂದಿದ್ದೀರಿ? ಸನ್ಮಾನ್ಯ ಸಚಿವರನ್ನು ಭೇಟಿ ಮಾಡಲು ಬಂದಿದ್ದೇವೆಂದು ಹೇಳಿದಾಗ, ಮಾನ್ಯ ಸಚಿವರನ್ನು ಭೇಟಿ ಮಾಡಲು ಹೋದಾಗ ಮಾನ್ಯ ಸಚಿವರು ನಾನು ಯಾವುದೇ ಕಾರಣಕ್ಕೂ ಇವರನ್ನು ಭೇಟಿ ಮಾಡುವುದಿಲ್ಲ ಎಂದು ಹೇಳಿದ ಮೇಲೆ ತಕ್ಷಣದಲ್ಲಿಯೇ ಅವರನ್ನು ಒಳಗಡೆ ಕೂರಿಸಿ ಇವರ ಮೇಲೆ ಮೊಕದ್ದಮೆಯನ್ನು ಹೂಡುವಂತಹ ಕೆಲಸವನ್ನು ಮಾಡಿದರು. ಯಾವುದೇ ಒಂದು ಫೋನ್ ಮೆನೇಜಿಗೂ ಕೂಡ ಅವಕಾಶ ಕೊಡಲಿಲ್ಲ. ಆನಂತರದಲ್ಲಿ ಅವರು ಹೇಳಿದರು. ನೀವು ಅರಣ್ಯದೊಳಗೆ ಕಾನೂನು ಬಾಹಿರವಾಗಿ ಈ ರಿಸರ್ವ್ ಫಾರೆಸ್ಟ್ ಒಳಗಡೆ ಬಂದಿದ್ದೀರಿ, ಅದಕ್ಕೋಸ್ಕರ ಮೊಕದ್ದಮೆ ಎನ್ನುವಂತಹ ವಿಚಾರವನ್ನು ಹೇಳಿದರು. ಅವರು ಒಳಗಡೆ ಹೋಗಿಲ್ಲ. ಮೂರು ಗೇಟುಗಳನ್ನು ಧಾಟಿ ಹೋಗಿಲ್ಲ. ಎಂದರೆ ಫಾರೆಸ್ಟ್ ಡಿಪಾರ್ಟ್‌ಮೆಂಟಿನ ಅಧಿಕಾರಿಗಳೇ ಅವರನ್ನು ಒಳಗಡೆ ಕರೆದುಕೊಂಡು ಹೋಗಿದ್ದಾರೆ. ಕ್ಯಾಮರಾ ಸೀಜ್ ಆಗಿದೆ. ಅವೆಲ್ಲಾ ವಿಚಾರ ಗೊತ್ತಿದೆ. ಇಷ್ಟೆಲ್ಲಾ ಆದರೂ ಸರ್ಕಾರದ ಒಂದು ಒಳ್ಳೆಯ ಡಿಸಿಷನ್ ತೆಗೆದುಕೊಂಡರು, ನಾನು ಅಭಿನಂದನೆಗಳನ್ನು ಹೇಳುತ್ತೇನೆ. ಸನ್ಮಾನ್ಯ ಮಂತ್ರಿಗಳು ಮತ್ತು ಮಾನ್ಯ ಮುಖ್ಯಮಂತ್ರಿಗಳು ಈ ವಿಚಾರದಲ್ಲಿ ಅಧಿಕಾರಿ ತನ್ನ ವ್ಯಾಪ್ತಿಯನ್ನು ಮೀರಿದ್ದಾರೆ ಎಂದು ಹೇಳಿ ಅವರ ಮೇಲೆ ಕ್ರಮವನ್ನು ತೆಗೆದುಕೊಳ್ಳಬೇಕೆಂದು ಇಬ್ಬರೂ ಹೇಳಿದರು. ಸರ್ಕಾರ ಒಳ್ಳೆಯ ಡಿಸಿಷನ್ ತೆಗೆದುಕೊಂಡಿತು. ಆದರೆ ಸರ್ಕಾರ ತೆಗೆದುಕೊಂಡಂತಹ ಡಿಸಿಷನ್‌ಗೆ ವಿರುದ್ಧವಾಗಿ ಇವತ್ತು ಒಬ್ಬ ಅಧಿಕಾರಿ ಡಿಸಿಎಫ್ ಸರ್ಕಾರದ ಮಾನ್ಯ ಮುಖ್ಯಮಂತ್ರಿಗಳ ನಿರ್ಣಯವನ್ನೂ ಕೂಡ ದಿಕ್ಕಾರ ಮಾಡಿ ಇವತ್ತು ವೆಹಿಕಲ್ ಅನ್ನು ಬಿಟ್ಟಿಲ್ಲ. ಕ್ಯಾಮರಾನನ್ನು ಕೊಟ್ಟಿಲ್ಲ. ಇವತ್ತೂ ಕೂಡ ನ್ಯಾಯಾಲಯದಲ್ಲಿ ಇತ್ಯರ್ಥವಾದ ನಂತರೂ ಬಿಟ್ಟಿಲ್ಲ. ಇನ್ನೊಂದು ಪ್ರಮುಖವಾದಂತಹ ಅಂಶ. ಇಂತಹ ಮಂತ್ರಿಗಳು ಇರುವಂತಹ ಇಲಾಖೆಯಲ್ಲಿ ಸರ್ಕಾರದ ನಿರ್ಣಯದ ವಿರುದ್ಧವಾಗಿ ಹೋಗಿ ಎಲ್ಲೋ ಹೋಗಿ ಸ್ಟೇ ತಂದಿದ್ದಾರೆ.

ಸರ್ಕಾರದ ವಿರುದ್ಧವಾಗಿ ಸ್ಟೇ ತಂದು ಮತ್ತೆ ತನ್ನ ದಾಂಧಲೆಯನ್ನು ಮಾಡುವಂತಹ, ಕೆಲಸಗಳನ್ನು ಮಾಡುವಂತಹ ವ್ಯವಸ್ಥೆ ಆಗುತ್ತದೆ ಎಂದರೆ ಈ ದೃಷ್ಟಿಯಲ್ಲಿ ವಿಶೇಷವಾಗಿ ಎಲ್ಲಾ ಪತ್ರಿಕೆಗಳ ಮುಖ ಪುಟದಲ್ಲಿ ಬಂದಿದೆ. ಶ್ರೀಗಂಧದ ಮರ, ಬೀಟೆ ಮರ ಇವೆಲ್ಲವನ್ನೂ ಕೂಡ ಸಾಗಿಸುವಂತಹದು. ಅರಣ್ಯದ ಇಲಾಖೆಯಲ್ಲಿರುವಂತಹ ಕಛೇರಿಯ ಪಕ್ಕದಲ್ಲೇ ನಡೆಯುತ್ತಿದೆ ಎಂದರೆ ಈ ಇಲಾಖೆಯಲ್ಲಿ ಏನು ನಡೆಯುತ್ತಿದೆ ಎನ್ನುವಂತಹದ್ದು ಗೊತ್ತಾಗುತ್ತದೆ ತಕ್ಷಣದಲ್ಲಿಯೇ ಮಾಧ್ಯಮದವರ ಕ್ಯಾಮರಾ ಇದೆ, ವಾಹನ ಇದೆ, ಅದನ್ನು ತಕ್ಷಣ ರಿಲೀಸ್ ಮಾಡುವಂತಹದ್ದು ಅವರ ಮೇಲೆ ಹಾಕಿರುವಂತಹ ಮೊಕದ್ದಮೆ ಫಾಲ್ಸ್‌ಕೇಸ್ ಹಾಕಿದ್ದಾರೆ ಅದನ್ನು ವಾಪಸ್ ತೆಗೆದುಕೊಳ್ಳಬೇಕು. ಅದನ್ನು ಖಂಡಿತವಾಗಿಯೂ ಆ ಒಂದು ಪ್ರಯತ್ನವನ್ನು ಮಾಡುತ್ತಾರೆ ಎನ್ನುವಂತಹ ನಂಬಿಕೆ, ವಿಶ್ವಾಸವನ್ನು ಇಟ್ಟುಕೊಂಡಿದ್ದೇನೆ. ಆ ಯಶಸ್ವಿ ಕಾರ್ಯವನ್ನು ಸಚಿವರು ಮಾಡುತ್ತಾರೆ ಎನ್ನುವ ವಿಶ್ವಾಸವನ್ನು ಇಟ್ಟುಕೊಂಡು ತಾವು ಅವಕಾಶ ಕೊಟ್ಟಿದ್ದಕ್ಕೆ ತಮಗೆ ವಂದಿಸಿ ನನ್ನ ಮಾತುಗಳನ್ನು ಮುಕ್ತಾಯ ಮಾಡುತ್ತೇನೆ.

†ಶ್ರೀ ಪಿ.ಜಿ.ಆರ್. ಸಿಂಧ್ಯಾ (ಕನಕಪುರ) : ಮಾನ್ಯ ಅಧ್ಯಕ್ಷರೆ, ನಾನು ಈ ವಿಚಾರದಲ್ಲಿ ಹೆಚ್ಚಿಗೆ ಮಾತನಾಡತಕ್ಕಂಥಹ ಅವಶ್ಯಕತೆ ಇಲ್ಲ. ಕಾರಣ ಮಾನ್ಯ ಮಹದೇವ ಪ್ರಸಾದ್ ಅವರು, ಮಾನ್ಯ ಬಚ್ಚೇಗೌಡರು, ಮಾನ್ಯ ಕೃಷ್ಣಮೂರ್ತಿ ಅವರು, ಮಾನ್ಯ ರಾಮದಾಸ್ ಅವರುಗಳು ಕಳೆದ ಎರಡು ಮೂರು ತಿಂಗಳಲ್ಲಿ ನಾಗರಹೊಳೆ, ಹುಣಸೂರು, ಕೊಡಗು ಜಿಲ್ಲೆಯ ಪ್ರದೇಶದಲ್ಲಿ ಕಾಡಿನಲ್ಲಿ ಆಗಿರತಕ್ಕಂಥಹ ಅನೇಕ ವಿಚಾರಗಳನ್ನು ಸದನದ, ರಾಜ್ಯದ ಜನತೆಯ ಗಮನಕ್ಕೆ ತಂದಿದ್ದಾರೆ. ಮೂರು ಪ್ರಮುಖವಾದ ವಿಚಾರ. ನಾನು ಈ ಘಟನಾವಳಿಗಳ ವಿವರಣೆ ಬಗ್ಗೆ ಹೋಗುವುದಿಲ್ಲ. ನಿನ್ನೆ ದಿನ ಮಾನ್ಯ ಮುಖ್ಯಮಂತ್ರಿಗಳು ಮಾತನಾಡುವಾಗ ಏನು ಹೇಳಿದರು ಎಂದರೆ ಶಾಸಕರು, ಮಂತ್ರಿಗಳು, ನ್ಯಾಯಾಲಯಗಳು, ಶಾಸಕಾಂಗ, ನ್ಯಾಯಾಂಗ ಮತ್ತು ಕಾರ್ಯಾಂಗ ಹಾಗೂ ಪತ್ರಿಕಾ ಮಿತ್ರರುಗಳು, ನಮ್ಮದೆಲ್ಲಾ ಒಂದು ದೊಡ್ಡ ಜವಾಬ್ದಾರಿ ಕಾರ್ಯಾಂಗ ಹಾಗೂ ಪತ್ರಿಕಾ ಮಿತ್ರರುಗಳು, ನಮ್ಮದೆಲ್ಲಾ ಒಂದು ದೊಡ್ಡ ಜವಾಬ್ದಾರಿ ಇದೆ ಎಂದು ಹೇಳಿದರು. ಈ ರೀತಿಯ ಘಟನಾವಳಿಗಳನ್ನು ತಡೆಗಟ್ಟುವುದಕ್ಕೆ ಭ್ರಷ್ಟಾಚಾರವನ್ನು ತಡೆಗಟ್ಟಲಿಕ್ಕೆ ನಾವೆಲ್ಲಾ ಕೆಲಸ ಮಾಡಬೇಕೆಂದು ಅವರು ಹೇಳಿದರು. ಒಂದು ಪ್ರಶ್ನೆ ಇದರಲ್ಲಿ ಉದ್ಭವ ಆಗುತ್ತದೆ. ಮೊದಲನೆಯದಾಗಿ ಈ ಸರ್ಕಾರಕ್ಕೆ ಅಧಿಕಾರಿಗಳ ಮೇಲೆ ಹಿಡಿತ ಇದೆಯೋ ಇಲ್ಲವೋ ಎನ್ನುವ ಪ್ರಶ್ನೆಗೆ ಮಾನ್ಯ ರಂಗನಾಥ್ ಅವರು ಉತ್ತರ ಕೊಡಬೇಕು. ಏಕೆಂದರೆ ಇವರು ಬಹಳ ಸೌಜನ್ಯದಿಂದ ಕೂಡಿರತಕ್ಕಂಥಹ ಸದಸ್ಯರು ತಾವು ಹಾಗೂ ಹಿರಿಯ ಮಂತ್ರಿಗಳು ಈ ರಾಜ್ಯದ ನಾಯಕರು. ನಿಮಗೇನಾದರೂ ಪತ್ರ ಬರೆದರೆ ಆ ಪತ್ರದ ಕೆಲಸಗಳನ್ನು ಮಾಡಿ ಇಂತಹ ಕೆಲಸಗಳನ್ನು ನಾನು ಮಾಡಿದ್ದೇನೆ, ಇಂತಹ ಕೆಲಸಗಳನ್ನು ಮಾಡಲಿಕ್ಕೆ ಆಗಲಿಲ್ಲ ಎನ್ನುವ ಒಂದು ಸೌಜನ್ಯವನ್ನು ಇಟ್ಟುಕೊಂಡಿರುವ ಮಂತ್ರಿಗಳ ಪೈಕಿ ನೀವು ಮೊದಲನೆಯವರು. ಕೆಲಸವು ಮಂತ್ರಿಗಳಿಗೆ ಪತ್ರ ಬರೆದರೆ ಮೂರು ತಿಂಗಳು ನಾಲ್ಕು ತಿಂಗಳಲ್ಲ, ಒಂದು ವರ್ಷದಿಂದ ಉತ್ತರವೇ ಬರುವುದಿಲ್ಲ. ನೀವು ಆ ಜಾತಿಗೆ ಸೇರಿದವರಲ್ಲ. ಆದರೆ ಇವತ್ತು ನಿಮಗೆ ಈ ಅಧಿಕಾರಿಗಳ ಮೇಲೆ ಹಿಡಿತ ಇದೆಯಾ? ಇದು ನನಗೆ ಅರ್ಥ ಆಗುತ್ತಾ ಇಲ್ಲ. ನೀವು ಕಾಡಿಗೆ ಹೋಗಿರತಕ್ಕಂಥಹ ಈಟಿವಿಯವರು ಇರಬಹುದು. ಇಂಡಿಯನ್ ಎಕ್ಸ್‌ಪ್ರೆಸ್ ಪತ್ರಿಕೆಯವರು ಇರಬಹುದು. ಆದರೆ ಕ್ಯಾಮರಾ ಏನು ಕಿತ್ತು ಕೊಂಡಿದ್ದಾರೆ, ಅವರು ಬಾಡಿಗೆಗೆ ತೆಗೆದುಕೊಂಡಿರತಕ್ಕ ಟಾಟಾ ಸುಮೋ ಎರಡೂವರೆ

ತಿಂಗಳಾಯಿತು, ಬಾಡಿಗೆಯನ್ನು ಕಂಪನಿಯವರು ಕಟ್ಟುತ್ತಿದ್ದಾರೆ. ಬಿಡುಗಡೆ ಮಾಡಬೇಕೆಂದು ಹೇಳಿ ವಿರಾಪೇಟೆಯ ಜಿಎಂಎಫ್‌ಸಿ ಕೋರ್ಟ್‌ನಲ್ಲಿ ಆರ್ಡರ್ ಆಗಿದೆ. ಮತ್ತೆ ಆದಾದ ಮೇಲೆ ನಮಗೆ ಜ್ಯೂರಿಸ್‌ಡಿಕ್ಷನ್ ಬರುವುದಿಲ್ಲ ಎಂದು ಹೇಳಿ ಅರಣ್ಯ ಇಲಾಖೆಯ ಹಿರಿಯ ಅಧಿಕಾರಿಗಳು ಇಲ್ಲಿಂದ ಆರ್ಡರ್ ಮಾಡಿ ಕಳುಹಿಸಿದ್ದಾರೆ. ತಾವು ಮತ್ತು ಮಾನ್ಯ ಮುಖ್ಯಮಂತ್ರಿಗಳೂ ಸಹಿತ ಅದನ್ನು ಬಿಡುಗಡೆ ಮಾಡಬೇಕು ಎನ್ನುವಂತಹ ಭರವಸೆಯನ್ನು ಪತ್ರಿಕಾಕರ್ತರು ಬಂದಂತಹ ಸಂದರ್ಭದಲ್ಲಿ ಕೊಟ್ಟಿದ್ದಾರೆ. ಇಷ್ಟೆಲ್ಲಾ ಆದರೂ ಸಹಿತ ಆ ಕ್ಯಾಮರಾವನ್ನು ಬಿಟ್ಟಿಲ್ಲ ಎಂದರೆ ಈ ಸರ್ಕಾರಕ್ಕೆ ಅಧಿಕಾರಿಗಳ ಮೇಲೆ ಏನಾದರೂ ಹಿಡಿತ ಇದೆಯೋ ಇಲ್ಲವೋ ಎನ್ನುವ ಪ್ರಶ್ನೆ ನನ್ನದು ಮೊದಲನೆಯದು. ಎರಡನೆಯದು ಮೊನ್ನೆ ಮೈಸೂರಿನ ಒಂದು ಪ್ರಸಿದ್ಧ ಕನ್ನಡಿಗರ ಪತ್ರಿಕೆ 'ಕನ್ನಡಿಗರ ಪ್ರಜಾ ನುಡಿ' ಪತ್ರಿಕೆ. ಶ್ರೀಗಂಧದ ಮರಗಳ ಸಾಗಣೆ. ಇದು ಕೆಳಮಟ್ಟದಲ್ಲಿರತಕ್ಕಂಥಹ ಅಧಿಕಾರಿಗಳ ಷಾಮೀಲು ಇಲ್ಲದೆ ಆಗುವುದಿಲ್ಲ. ನನಗೆ ಗೊತ್ತಿದೆ. ಪರಿಸರವನ್ನು, ಕಾಡನ್ನು ಕಾಪಾಡಲಿಕ್ಕೆ ನೀವು ನಿಮ್ಮ ಕಾರ್ಯದರ್ಶಿಗಳು ಎಷ್ಟೊಂದು ಪ್ರಾಮಾಣಿಕವಾಗಿ ಪ್ರಯತ್ನ ಮಾಡುತ್ತಿದ್ದೀರಿ ಎಂಬುದು ಗೊತ್ತಿದೆ. ಆದರೆ ಇದು ಹೇಗೆ ಆಗುತ್ತಿದೆ? ಈ ಅಧಿಕಾರಿ ಬಗ್ಗೆ ಬಹಳ ಸಾರಿ ಚರ್ಚೆ ಆಯಿತು. ಈ ಅಧಿಕಾರಿಗಳ ಹೆಸರು ಹೇಳಬಾರದು, ಅವರು ಡಿಫೆಂಡ್ ಮಾಡಿಕೊಳ್ಳುವುದಕ್ಕೆ ಆಗುವುದಿಲ್ಲವೆಂದರು. ಶಾಸಕರುಗಳನ್ನು ಏಕವಚನದಲ್ಲಿ ಕರೆಯುತ್ತಾರೆ. ನಾನು ಅನೇಕ ಘಟನಾವಳಿಗಳನ್ನು ಹೇಳಿ ಸಮಯವನ್ನು ತೆಗೆದುಕೊಳ್ಳುವುದಕ್ಕೆ ಎಷ್ಟೊಂದು ಅಪಮಾನಕರವಾಗಿ ನಡೆದುಕೊಂಡಿದ್ದಾರೆ ಎನ್ನತಕ್ಕದ್ದರ ಬಗ್ಗೆ ನನ್ನ ಹತ್ತಿರ ಅನೇಕ ಸಾಕ್ಷಿ, ಆಧಾರಗಳು ಇವೆ. ಶಾಸಕರ ಬಗ್ಗೆ, ಜನಪ್ರತಿನಿಧಿಗಳ ಬಗ್ಗೆ ಸ್ವಲ್ಪವಾದರೂ, ಗೌರವ ಇಲ್ಲದೇ ಇರುವಂತಹ ಅಧಿಕಾರಿ. ಇವರನ್ನು ಗುಲ್ಬರ್ಗಾಕ್ಕೆ ವರ್ಗಾವಣೆ ಮಾಡಿದ್ದೀರಿ. ಬೇರೆಯವರಿಗೆ ನೀವು ಸಿಎಟಿಗೆ ಹೋಗಿ ಸ್ಟೇ ತೆಗೆದುಕೊಂಡು ಬರುತ್ತಾರೆಂದು ಸರ್ಕಾರಕ್ಕೆ ಇಂತಹ ಅಧಿಕಾರಿಗಳ ಮೇಲೆ ಹಿಡಿತ ಇಟ್ಟು ಕೊಳ್ಳುವುದಕ್ಕೆ ನಿಮ್ಮ ಕಡೆಯಿಂದ ಸಾಧ್ಯವಿಲ್ಲವಾ? ಇದು ಇವತ್ತು ಇರತಕ್ಕಂತಹ ಪ್ರಶ್ನೆ. ಯಾರಾದರೂ ನೀವು ಏಕೆ ಬಂದಿದ್ದೀರಿ ಎಂದು ಕೇಳಿದರೆ, ಪತ್ರಕರ್ತರು ಎಲ್ಲಾ ಕಡೆ ಹೋಗುತ್ತಾರೆ. ಅದನ್ನು ತಪ್ಪು ಎಂದು ನಾವು ಹೇಳುವುದಕ್ಕಾಗುವುದಿಲ್ಲ. ಹೋಗತಕ್ಕಂತಹ ಹಕ್ಕು ಅವರಿಗೆ ಇದೆ. ವಿಧಾನಸಭೆ ಒಳಗಡೆ ಪತ್ರಕರ್ತರಿಗೆ ಅವಕಾಶ ಮಾಡಿ ಕೊಟ್ಟಿದ್ದೇವೆ. ವಿಧಾನಸಭೆ ಅರಣ್ಯಕ್ಕಿಂತ ಮಹತ್ವವಾದ ಪ್ರದೇಶ ತಾನೇ? ಹಾಗಾದರೆ ಅವರಿಗೆ ಕಳುಹಿಸುವುದಕ್ಕಾಗುತ್ತದೆಯೇ? ಅವರ ಮೇಲೆ ಕೇಸ್ ಹಾಕುವುದಕ್ಕಾಗುತ್ತದೆಯೇ? ಆದ್ದರಿಂದ ತಾವು ದಯಮಾಡಿ ನನ್ನ ಒತ್ತಾಯ ಏನೆಂದರೆ, ಒಂದು ಮರಗಿಡಗಳನ್ನು ಅರಣ್ಯ ಸಂಪತ್ತನ್ನು ರಕ್ಷಣೆ ಮಾಡುವುದು, ವನ್ಯ ಜೀವಿ ರಕ್ಷಣೆ ಮಾಡುವುದು ಇದರ ಬಗ್ಗೆ ನಿಮಗೆ ವೈಯುಕ್ತಿಕವಾಗಿ ಇರತಕ್ಕಂತಹ ಕಾಳಜಿ ಬಗ್ಗೆ ಪ್ರಶ್ನೆ ಮಾಡುತ್ತಿಲ್ಲ. ಆದರೆ ಇದು ಆಗುತ್ತಿರತಕ್ಕಂಥದ್ದು ಇಂತಹ ಅಧಿಕಾರಿಗಳು ಇರುವ ಕಡೆ ಆಗುತ್ತದೆ ಎಂದರೆ ಎಲ್ಲೋ ಒಂದು ಕಡೆ ಕೈ ತಪ್ಪಿದೆ. ಅದನ್ನು ಸರಿಪಡಿಸಬೇಕು. ಎರಡನೆಯದಾಗಿ ತತಕ್ಷಣ ಆ ಕ್ಯಾಮರಾ ಮತ್ತು ಟಾಟಾಸುಮೋ ಬಿಡುಗಡೆ ಮಾಡುವುದಕ್ಕೆ ಕ್ರಮ ತೆಗೆದುಕೊಂಡು ಆ ಅಧಿಕಾರಿಯನ್ನು ನೀವು ನಮ್ಮ ರಾಜ್ಯ ಸರ್ಕಾರದ ನಿಯಮಾವಳಿ ಪ್ರಕಾರ ಅಮಾನತ್ತಿನಲ್ಲಿಡಬೇಕು. ಅಮಾನ್ತಿನಲ್ಲಿಟ್ಟಾಗ ಇವರಿಗೂ ಗೊತ್ತಾಗುತ್ತದೆ, ಇವರ ಶಕ್ತಿ ಏನೆಂದು. ಇಲ್ಲದೆ ಹೋದರೆ ಯಾರು ಏನು ಬೇಕಾದರೂ ಮಾಡಿಕೊಳ್ಳಬಹುದು. ಇವತ್ತು ಮುಖ್ಯ ಮಂತ್ರಿಗಳು ಮಾಡತಕ್ಕಂತಹ ಆಜ್ಞೆಗಳಿಗೆ ಬೆಲೆ ಇಲ್ಲ ಎನ್ನುವುದಕ್ಕೆ ಇದು ಒಂದು ಸಾಕ್ಷಿ. ಇದಕ್ಕೆ ತಾವು ಉತ್ತರ ಕೊಡಬೇಕೆಂದು ನಾನು ಬಯಸುತ್ತೇನೆ.

†ಶ್ರೀ ಜಗದೀಶ್ ಶೆಟ್ಟರ್ (ವಿರೋಧ ಪಕ್ಷದ ನಾಯಕರು) : ಮಾನ್ಯ ಅಧ್ಯಕ್ಷರೆ, ಈ ಟಿವಿಯ ಪ್ರಮುಖ ವ್ಯವಸ್ಥಾಪಕರು ನ್ಯೂಸ್ ಕೋ ಆರ್ಡಿನೇಟರ್ ಅವರು ಪತ್ರ ಸಹ ಬರೆದಿದ್ದಾರೆ. ಡಿಎಫ್‌ಒಗೆ ನೀವು ಏನು ಕ್ಯಾಮರಾ ಮತ್ತು ವೆಹಿಕಲ್ ಸೀಜ್ ಮಾಡಿದ್ದೀರಿ ಅದನ್ನು ತಕ್ಷಣ ಬಿಡುಗಡೆ ಮಾಡಬೇಕೆಂದು ಪತ್ರ ಬರೆದಿದ್ದಾರೆ. ಎರಡು ಬಾರಿ ಪತ್ರ ಬರೆದು ಕೊಟ್ಟಿದ್ದಾರೆ. ಇಷ್ಟಾದರೂ ಅಧಿಕಾರಿ ಯಾವುದೇ ರೆಸ್ಪಾನ್ಸ್ ಕೊಟ್ಟಿಲ್ಲ. ಮುಖ್ಯಮಂತ್ರಿಗಳೂ ಹೇಳಿದರು, ತಾವು ಹೇಳಿದರೂ, ಎಲ್ಲರೂ ಹೇಳಿದ ಮೇಲೆ ರೆಸ್ಪಾನ್ಸ್ ಕೊಡಲಿಲ್ಲ ಎಂದರೆ ಯಾರಿಗೂ ಗೌರವ ಕೊಡದ ರೀತಿಯಲ್ಲಿ ನಡೆದುಕೊಳ್ಳುವುದು ಇಲ್ಲಿ ಕಂಡು ಬರುತ್ತದೆ. ಆದ್ದರಿಂದ ತಕ್ಷಣ ರಿಪೋರ್ಟರ್ಸ್ ಕ್ಯಾಮರಾ ಮತ್ತು ವೆಹಿಕಲ್ ಏನು ಸೀಜ್ ಮಾಡಿದ್ದಾರೆ ಅದನ್ನು ತಕ್ಷಣ ಬಿಡುಗಡೆ ಮಾಡುವುದು ಆಗಬೇಕಾಗಿದೆ. ಯಾರು ಡಿಎಫ್‌ಒ ಇದ್ದಾರೆ, ಧಾರವಾಡ ಜಿಲ್ಲೆಯಲ್ಲಿ ಇಂತಹ ಒಬ್ಬ ಡಿಎಫ್‌ಎ ಇದ್ದ, ಅವನಿಗೆ ಬೇರೆ ಕಡೆ ವರ್ಗ ಮಾಡಿ ಕಳುಹಿಸಿದಿರಿ. ಈ ಅಧಿಕಾರಿ ಬಗ್ಗೆ ಸರ್ಕಾರ ತಕ್ಷಣ ಕ್ರಮ ತೆಗೆದುಕೊಳ್ಳಬೇಕಾಗಿದೆ. ಮುಖ್ಯಮಂತ್ರಿಗಳು ತಾವು ಹೇಳಿದ ಮೇಲೆ ಇಷ್ಟೆಲ್ಲಾ ಒತ್ತಾಯ ಮಾಡಿದ ಮೇಲೆ ರೆಸ್ಪಾನ್ಸ್ ಕೊಡಲಿಲ್ಲ ಎಂದರೆ ಹೇಗೆ? ತಕ್ಷಣ ಸಸ್ಪೆಂಡ್ ಮಾಡಬೇಕಾಗುತ್ತದೆ. ಧಾರವಾಡದಲ್ಲಿದ್ದವನಿಗೆ ವರ್ಗಾವಣೆ ಮಾಡಿದಿರಿ, ಆದರೆ ಇವನಿಗೆ ತಕ್ಷಣ ಸಸ್ಪೆಂಡ್ ಮಾಡಬೇಕಾಗುತ್ತದೆ. ಎಲ್ಲೋ ಹೋಗಿ ಅಪೀಲ್ ಮಾಡುವುದು ಮತ್ತು ಸ್ಟೇ ತೆಗೆದುಕೊಂಡು ಬರುವುದು ಈ ರೀತಿಯ ಉದ್ದಟತನ ತೋರಿಸುವ ಅಧಿಕಾರಿಗಳ ಮೇಲೆ ಸರ್ಕಾರ ಕಟ್ಟು ನಿಟ್ಟಿನ ಕ್ರಮ ತೆಗೆದುಕೊಂಡು ತಕ್ಷಣ ಸಸ್ಪೆಂಡ್ ಮಾಡಬೇಕಾಗುತ್ತದೆ. ವೆಹಿಕಲ್ ಏನು ಸೀಜ್ ಮಾಡಿದ್ದಾರೆ ಅದನ್ನು ರಿಲೀಸ್ ಮಾಡುವುದಕ್ಕೆ ತಾವು ಕ್ರಮ ತೆಗೆದುಕೊಳ್ಳಬೇಕಾಗುತ್ತದೆ.

†ಶ್ರೀ ಕೆ.ಹೆಚ್. ರಂಗನಾಥ್ (ಅರಣ್ಯ ಸಚಿವರು) : ಮಾನ್ಯ ಸಭಾಧ್ಯಕ್ಷರೆ, ಈ ದಿವಸ ಮಾನ್ಯ ಸದಸ್ಯರಾದ ಬಚ್ಚೇಗೌಡರು, ಕೃಷ್ಣಮೂರ್ತಿಯವರು, ಹೆಚ್.ಎಸ್. ಮಹದೇವ ಪ್ರಸಾದ್‌ರವರು ಮತ್ತು ಸಿಂಧ್ಯಾರವರು ಕಳುಹಿಸಿರತಕ್ಕಂತಹ ಸೂಚನೆಯನ್ನು ತಾವು ಗಮನಿಸಿದ್ದೀರಿ ಎಂದು ನಾನು ಭಾವಿಸುತ್ತೇನೆ. ಹಾಗೆಯೇ ಮಾನ್ಯ ರಾಮದಾಸ್‌ರವರು ಕೊಟ್ಟ ಸೂಚನೆ ಬಗ್ಗೆ ತಾವು ಪ್ರಸ್ತಾಪ ಮಾಡಬೇಕೆಂದು ಅವರಿಗೆ ಅನುಮತಿ ಕೊಟ್ಟಿದ್ದರಿಂದ ಅವರ ಪ್ರಸ್ತಾಪ ಮಾಡಿದ್ದಾರೆ. ನಾನು ಮಾನ್ಯ ಸದಸ್ಯರುಗಳು ಪ್ರಸ್ತಾಪ ಮಾಡಿರತಕ್ಕಂತಹ ವಿಚಾರಗಳಲ್ಲಿ ಅವರ ನೋಟಿಸ್‌ನಲ್ಲಿ ಏನಿದೆ ಅದಕ್ಕಿಂತ ಬೇರೆ ವಿಚಾರ ಪ್ರಸ್ತಾಪ ಮಾಡಿದ್ದಾರೆ. ಅದರ ಬಗ್ಗೆ ನಾನು ಮಾಹಿತಿ ತರಿಸಿಕೊಳ್ಳುವುದಕ್ಕೆ ಪ್ರಯತ್ನ ಪಡುತ್ತೇನೆ. ಮಾನ್ಯ ಸಿಂಧ್ಯಾರವರು ಮತ್ತು ಇತರೇ ಮಿತ್ರರು ಕೊಟ್ಟಿರತಕ್ಕಂತಹ ಸೂಚನೆಯಲ್ಲಿ

"ನಾಗರಹೊಳೆ ಅಭಯಾರಣ್ಯದಲ್ಲಿ ವ್ಯಾಪ್ತಿಗೆ ಬರುವ ಹುಣಸೂರು ತಾಲ್ಲೂಕು ಹನುಮೋಡು ಗ್ರಾಮದಿಂದ ಸುಮಾರು 20 ಕಿಲೋ ಮೀಟರ್ ದೂರದಲ್ಲಿರುವ ಮೂರ್ಕಲ್ ಬಳಿಯ ವೀರನಹೊಸಹಳ್ಳಿ ಅರಣ್ಯ ವ್ಯಾಪ್ತಿಯಲ್ಲಿ ಬೆಳೆದು ನಿಂತಿರುವ ನೂರಾರು ಗಂಧದ ಮತ್ತು ತೇಗದ ಮರಗಳನ್ನು ಕಡಿದು ಸಾಗಿಸುತ್ತಿದ್ದು ಈ ವಿಚಾರದಲ್ಲಿ ರಕ್ಷಿತ ಅರಣ್ಯ ಹೆಸರಿನಲ್ಲಿರುವ ಇಷ್ಟೆಲ್ಲಾ ಲೂಟಿ ನಡೆಯುತ್ತಿದ್ದರೂ ಸಹ ಯಾವುದೇ ಕ್ರಮ ಕೈಗೊಳ್ಳದಿದ್ದರೂ ಇಂತಹ ವಿಚಾರಗಳ ಬಗ್ಗೆ ಬೆಳಕು ಚೆಲ್ಲಲು ಪ್ರಯತ್ನಿಸುತ್ತಿರುವ ಪತ್ರಕರ್ತರನ್ನು ಛಾಯಾಗ್ರಾಹಕರನ್ನು ಬಂಧಿಸಲು ಬೆದರಿಕೆ ಹಾಕುತ್ತಿರುವ ಅರಣ್ಯ ಅಧಿಕಾರಿಗಳ ವರ್ತನೆ ಬಗ್ಗೆ" ಹೇಳಿದ್ದಾರೆ.

ಬೇರೆ ಬೇರೆ ವಿಚಾರಗಳನ್ನು ಪ್ರಸ್ತಾಪ ಮಾಡಿದ್ದಾರೆ. ಬಹಳ ಮಟ್ಟಿಗೆ ಅದನ್ನು ಈ ನೋಟೀಸ್‌ನಲ್ಲಿ ಹೇಳಿದ್ದರೆ ಈ ಸಭೆಗೆ ವಿಷಯಗಳನ್ನು ತರಿಸಿಕೊಡುವುದಕ್ಕೆ ಅನುಕೂಲವಾಗುತ್ತಿತ್ತು. ರಾಮದಾಸ್‌ರವರು ಪ್ರಸ್ತಾಪ ಮಾಡುವಾಗ ಅಧಿಕಾರಿ ಹೆಸರು ಹೇಳಿದ್ದಾರೆ. ತಮಗೆ ಸಂಪ್ರದಾಯ ಗೊತ್ತಿದೆ. ಯಾವ ಮನುಷ್ಯ ಇಲ್ಲಿ ಬಂದು ಡಿಫೆಂಡ್ ಮಾಡುವುದಕ್ಕೆ ಸಾಧ್ಯವಿಲ್ಲ ಅವರ ಹೆಸರು ಹೇಳಬಾರದು ಎಂದು ಇದೆ. ಅದನ್ನು ತಾವು ಕಡತದಿಂದ ತೆಗೆಸಬೇಕು.

ಅಧ್ಯಕ್ಷರು : ತೆಗೆಸುತ್ತೇನೆ.

ಶ್ರೀ ಕೆ.ಹೆಚ್. ರಂಗನಾಥ್ : ಅರಣ್ಯ ಅಧಿಕಾರಿ ಎಂದು ಪ್ರಸ್ತಾಪ ಮಾಡಿದ್ದರೆ ಆ ಮಾತು ಬೇರೆ. ಅದು ಅಡ್ಡಿ ಬರುವುದಿಲ್ಲ. ರಾಮದಾಸ್‌ರವರು ಪ್ರಸ್ತಾಪ ಮಾಡಿರುವ ವಿಚಾರದ ಬಗ್ಗೆ ನಾನು ತದನಂತರ ಹೇಳುತ್ತೇನೆ. ಮಾನ್ಯ ಹಿರಿಯ ಸದಸ್ಯರಾದ ಸಿಂಧ್ಯಾರವರು ಅಧಿಕಾರಿಗಳು ಕೋರ್ಟಿಗೆ ಹೋಗಿದ್ದಾರೆ, ಎಂದರೆ ಅವರಿಗೆ ಇರತಕ್ಕಂತಹ ಹಕ್ಕು ಅದು. ಆ ಹಕ್ಕನ್ನು ಲೋಕಸಭೆಯವರು ಕೊಟ್ಟಿದ್ದಾರೆ, ನಾವೂ ಕೊಟ್ಟಿದ್ದೇವೆ. ರಾಜ್ಯಾಂಗದಲ್ಲಿ ಆ ಅಧಿಕಾರ ಇದೆ. ಮೊದಲು ಹೈಕೋರ್ಟಿಗೆ ಹೋಗಬೇಕಾಗಿತ್ತು. ಕೆಎಟಿ ನಮಗೆ ಇದೆ, ಸಿಎಟಿ ಅವರಿಗೆ ಇದೆ. ಅವರಿಗೆ ಏನಾದರೂ ತೊಂದರೆಯಾದರೆ ಹೋಗತಕ್ಕಂತಹ ಅಧಿಕಾರ ನಾವು ಕೊಟ್ಟಿದ್ದೇವೆ. ಅವರು ಹೋಗಿದ್ದಾರೆ. ಅದು ಸರಿ ತಪ್ಪು ಎಂದು ತೀರ್ಮಾನ ಮಾಡುವವರೆಗೆ ನಾವು ಕಾದು ಸುಮ್ಮನೆ ಕೂರಬೇಕಾಗುತ್ತದೆ. ಪ್ರಶ್ನೆ ಸಸ್ಪೆಂಡ್ ಮಾಡುತ್ತೇವೆಂದು ಹೇಳುವಾಗ ಪ್ರೈಮಾಫೇಸಿಯಲ್ಲಿ ಏನಾದರೂ ಅದಕ್ಕೆ ಅವಕಾಶ ಇದ್ದರೆ ಮಾತ್ರ ಮಾಡುವುದಕ್ಕೆ ಸಾಧ್ಯ ಇದೆ ಇಲ್ಲದಿದ್ದರೆ ಮಾಡುವುದಕ್ಕೆ ಬರುವುದಿಲ್ಲ. ಮಾನ್ಯ ಸದಸ್ಯರು ಹೋಮ್ ಮಿನಿಸ್ಟರ್ ಆಗಿದ್ದವರು. ನಾನೇನೂ ಹೋಮ್ ಮಿನಿಸ್ಟರ್ ಅದವನಲ್ಲ. ಇಂತಹ ಅರಣ್ಯ ಇಟ್ಟುಕೊಂಡು ನೀವು ಕೇಳಿದ್ದಕ್ಕೆ ಹೇಳುವ ಪರಿಸ್ಥಿತಿ ಬಂದಿದೆ. ಹುಲಿ ಸತ್ತಿತು, ಆನೆ ಓಡಿ ಹೋಗಿದೆ ಇಂತಹ ವಿಷಯಗಳನ್ನು ಹೇಳುವ ಪರಿಸ್ಥಿತಿ ನನಗೆ ಬಂದಿದೆ. ಮೊಲ ಹೊಡೆದಿದ್ದಾರೆ, ಎಂದು ಹೇಳಿದರು ಜಿಂಕೆ ಹೊಡೆದಿದ್ದಾರೆ, ನಾನು ಬಹಳ ಕಷ್ಟಪಟ್ಟು ನೋಡಿದೆ ಜಿಂಕೆಯೂ ಇಲ್ಲ, ಮೊಲವೂ ಇಲ್ಲ, ಇದರಲ್ಲ ಏನೂ ಇಲ್ಲ.

ಶ್ರೀ ಎಸ್.ಎಸ್. ಪಾಟೀಲ್ : ಜಿಂಕೆ ಮಾಂಸ ಊಟ ಮಾಡುತ್ತಾರೆ.

ಶ್ರೀ ಕೆ.ಹೆಚ್. ರಂಗನಾಥ್ : ಮಾಡುತ್ತಾರೆ. ನಿಮ್ಮ ಕೈಯಲ್ಲಿ ಆಗಲಿಲ್ಲ ಎಂದರೆ, ಜಿಂಕೆಯನ್ನು ತಿಂದು ಅರಗಿಸಿಕೊಳ್ಳುವ ಜನಗಳಿದ್ದಾರೆ. ನಿಮಗೆ ಕಡುಬು ರೊಟ್ಟಿ, ರೊಟ್ಟಿ ಅಷ್ಟೆ. ಇಷ್ಟೇ ನೀವು ತಿಂದು ಜೀರ್ಣಿಸಿಕೊಳ್ಳುವುದು. ಅದನ್ನು ಪ್ರಸ್ತಾಪ ಮಾಡಿದಿರಿ, ಅಂಥದ್ದು ಏನೂ ಆಗಿಲ್ಲ. ತತಕ್ಷಣ ನನಗೆ ನೋಟೀಸ್ ಕೊಟ್ಟಿದ್ದಾರೆ, ಇವತ್ತು ಅದು ಬರಬೇಕೆಂದು ಹೇಳಿದಾಗ, ಅಧಿಕಾರಿಗಳ ಜೊತೆ ಪ್ರಸ್ತಾಪ ಮಾಡಿ ಬಂದಾಗ, ನಾಗರಹೊಳೆ ಭಾಗಕ್ಕೆ ತಾವು ಏನು ಪ್ರಸ್ತಾಪ ಮಾಡಿದ್ದೀರಿ, ವೀರನಹೊಸಹಳ್ಳಿ ಈ ಭಾಗದಲ್ಲಿ ಅಲ್ಲಿ ಆಗಿರತಕ್ಕಂಥದ್ದು, 12 ಮರಗಳು ಕಡಿಮೆ ಬಿದ್ದಿವೆ, ನಾಲ್ಕು ವರ್ಷಗಳಿಂದ ಏಳು ವರ್ಷಗಳವರೆಗೆ ಆಯಸ್ಸು ಉಳ್ಳಂತಹವು, ಅದರ ಒಳಗಡೆ ಇರತಕ್ಕಂತಹ ಪೋರ್ ಏನಿದೆ, ಚೇಕ್ ಎಂದು ಕರೆಯುತ್ತಾರೆ. ಅದು ಇನ್ನು ಬೆಳವಣಿಗೆ ಆಗದೆ ಇದ್ದುದನ್ನು ನೋಡಿ ಬಿಟ್ಟು ಹೋಗಿದ್ದಾರೆ. ನಮ್ಮ ಅರಣ್ಯ ಇಲಾಖೆ ಗಂಧದ ಮರಗಳಿವೆ, ಪ್ರೈವೇಟ್ ಅರಣ್ಯದಲ್ಲಿ ಕೂಡ ಗಂಧದ ಮರಗಳಿವೆ. ಬಹಳ ಮಟ್ಟಿಗೆ ಈ ಕಳ್ಳತನದ ವ್ಯಾಪ್ತಿ, ಅದರ ಉದ್ಯೋಗ ಹಮ್ಮಿಕ್ಕೊಂಡಿರುವವರು ಹೋಗಿರಬಹುದು. 12 ಮರಕ್ಕಿಂತ ಹೆಚ್ಚಿಗೆ ಮರ ಕಡಿದಿಲ್ಲ. ಅದರಲ್ಲಿ ಕೂಡ ಒಬ್ಬನಿಗೆ ಅರೆಸ್ಟ್ ಮಾಡಿ ಅವರ ಮೇಲೆ ಕೇಸ್ ಹಾಕಿದ್ದಾರೆ. ಆದರೆ

ನನ್ನ ವರದಿ ಪ್ರಕಾರ, ವರದಿಗಾರರು, ಪತ್ರಕರ್ತರು ಹೋಗಿದ್ದರೋ, ಛಾಯಾಗ್ರಾಹಕರು ಹೋಗಿದ್ದರೋ ಎಂದು ಪ್ರಶ್ನೆ ಮಾಡಿದಾಗ ಯಾರೂ ಹೋಗಿಲ್ಲ ಎಂಬುದು ಗೊತ್ತಾಯಿತು. ಹೋಗದೆ ಇರುವಾಗ ಅವರಿಗೆ ಬೆದರಿಕೆ ಹಾಕತಕ್ಕಂತಹ ಪ್ರಶ್ನೆ ಬರುವುದಿಲ್ಲ. ಮೊಬೈಲ್ ಫೋನ್ ಅದರಲ್ಲಿ ನನ್ನ ಫೋಟೋ ಬರುವ ಹಾಗಿದೆ. ವಿಧಾನ ಪರಿಷತ್ತಿನ ಸದಸ್ಯರಾದ ಪ್ರಭಾಕರ ಕೋರೆ ಅವರ ಹತ್ತಿರ ಅಂತಹ ಫೋನ್ ಇದೆ. ನೀವು ಮಾತನಾಡಿದ್ದು ರೆಕಾರ್ಡ್ ಆಗುತ್ತದೆ, ನಿಮ್ಮ ಫೋಟೋ ಬರುತ್ತದೆ ಎಂದು ಹೇಳಿದರು. ನಾನು ದೂರಹೋಗುತ್ತೇನೆ ಸ್ವಾಮಿ ಎಂದು ಹೇಳಿದೆ ನಾನು ನೋಡಿದ್ದೇನೆ. ಕನ್ನಡ ಪ್ರಭದಲ್ಲಿ ಬಂದ ತಕ್ಷಣ ಮೊನ್ನೆ ನಾನು ನಮ್ಮ ಅಧಿಕಾರಿಗಳಿಗೆ ಹೇಳಿದೆ, ಅದರ ಬಗ್ಗೆ ಪರಿಶೀಲನೆ ಮಾಡಿಸುತ್ತೇನೆ. ಪರಿಶೀಲನೆ ಮಾಡಿಸಿ ಯಾರು ಅದಕ್ಕೆ ಹೊಣೆಗಾರರು ಎನ್ನುವುದನ್ನು ನೋಡಿ ಅವರಿಗೆ ಶಿಕ್ಷೆ ಮಾಡುವುದಕ್ಕೆ ಪ್ರಯತ್ನ ಮಾಡೋಣ. ಅಧಿಕಾರಿಗಳ ಮೇಲೆ ಹಿಡಿತ ಇಲ್ಲವೆಂದು ತಕ್ಷಣ ಒಂದು ಅಭಿಪ್ರಾಯಕ್ಕೆ ಬಂದು ನಮ್ಮ ಮೇಲೆ ಹೇಳುವುದು ತಪ್ಪು.

1.00 ಪಿ.ಎಂ.

ತತ್‌ಕ್ಷಣವೇ ಅದನ್ನು ಪರಿಶೀಲನೆ ಮಾಡಿಸುತ್ತೇನೆ. ಅಧಿಕಾರಿಗಳ ಮೇಲೆ ಕಾನೂನು ಪ್ರಕಾರವಾಗಿ ನಾವು ಎಷ್ಟು ಹಿಡಿತವನ್ನು ಇಟ್ಟುಕೊಳ್ಳಬಹುದೋ ಅಷ್ಟು ಹಿಡಿತವನ್ನು ಇಟ್ಟುಕೊಳ್ಳಲಿಕ್ಕೆ ಸಾಧ್ಯವಾಗುತ್ತದೆ. ನಾವು ಕಾನೂನು ಬಾಹಿರವಾಗಿ ವರ್ತಿಸಿದರೆ, ಅಧಿಕಾರಿಗಳಿಗೆ ಅವರ ರಕ್ಷಣೆ ಪಡೆದುಕೊಳ್ಳಲಿಕ್ಕೆ ಕೋರ್ಟು, ಕಛೇರಿಗಳಿವೆ. ಅದನ್ನು ಅವರು ಮಾಡಿಕೊಳ್ಳಬೇಕಾಗುತ್ತದೆ. ಅದನ್ನು ನಾವು ತಪ್ಪು ಎಂದು ಹೇಳಲಿಕ್ಕೆ ಬರುವುದಿಲ್ಲ. ಇನ್ನು ಮಾನ್ಯ ರಾಮದಾಸ್‌ರವರು ಕ್ಯಾಮೆರಾ ವಗೈರೆ ಕೊಡಬೇಕು ಎಂದು ಪ್ರಸ್ತಾಪ ಮಾಡಿರತಕ್ಕ ವಿಷಯದ ಬಗ್ಗೆ ಹೇಳುವುದಾದರೆ, ಅದರ ಬಗ್ಗೆ ಮಾನ್ಯ ವಿರೋಧ ಪಕ್ಷದ ನಾಯಕರೂ ಕೂಡ ಈಗ ಪ್ರಸ್ತಾಪ ಮಾಡಿದರು. ನಾನು ಈ ಘಟನೆಯಾದ ಒಂದೆರಡು ದಿವಸಗಳಲ್ಲಿಯೇ ಹುಣಸೂರಿಗೆ ಹೋಗಿದ್ದೆ. ಮಾನ್ಯ ಚಿಕ್ಕಬೋರಯ್ಯನವರು ನಮ್ಮ ಸ್ನೇಹಿತರು. ಅವರ ಹುಟ್ಟಿದ ಹಬ್ಬ ಇತ್ತು. ಆ ಸಮಯದಲ್ಲಿ ನಾನು ಅಲ್ಲಿಗೆ ಹೋಗಿದ್ದೆ. ಮಾನ್ಯ ಗ್ರಾಮೀಣಾಭಿವೃದ್ಧಿ ಮಂತ್ರಿಗಳು ದಿನಾಂಕ 2.4.2002ನೇ ತಾರೀಖು ಎರಡು ರೂಮುಗಳನ್ನು ರಿಸರ್ವ್ ಮಾಡಬೇಕೆಂದು ಅರ್ಜಿ ಕೊಟ್ಟಿದ್ದಾರೆ. 17ನೇ ತಾರೀಖು ಅದಕ್ಕೆ ಹಣವನ್ನು ಕಟ್ಟಿದ್ದಾರೆ. ಸಾರ್ವಜನಿಕರು ಕಟ್ಟತಕ್ಕಂಥ ರೀತಿಯಲ್ಲಿ 750 ರೂಪಾಯಿಗಳ ಹಣವನ್ನು ಕಟ್ಟಿದ್ದಾರೆ. ಎಷ್ಟು ದಿವಸದಿಂದ ಎಷ್ಟು ದಿವಸದವರೆಗೆ ನಾನು ಇರುತ್ತೇನೆ ಎಂಬ ಮಾತನ್ನೂ ಸಹ ಅವರು ಹೇಳಿದ್ದಾರೆ. 21ನೇ ತಾರೀಖಿನಿಂದ ನಾನು 26ನೇ ತಾರೀಖಿನವರೆಗೆ ಇರುತ್ತೇನೆ ಎನ್ನುವ ಮಾತನ್ನು ಹೇಳಿದ್ದಾರೆ. ಇನ್ನೊಂದು ರೂಮ್ ಅನ್ನೂ ಸಹ ಅವರ ವೈಯಕ್ತಿಕವಾಗಿ ರಿಸರ್ವ್ ಮಾಡಿಸಿಕೊಂಡಿದ್ದಾರೆ. ಅವರು ಸಾರ್ವಜನಿಕರಂತೆ ಹೋಗಲು ಪ್ರಯತ್ನ ಪಟ್ಟಿದ್ದಾರೆ. ಹಾಗೆಯೇ ಅಲ್ಲಿ ಹೋಗಿ ಇದ್ದಾರೆ. ಯಾವ ಪತ್ರಕರ್ತರನ್ನೂ ಅವರು ಬರಮಾಡಿಕೊಳ್ಳಲಿಕ್ಕೆ ಪ್ರಯತ್ನ ಪಟ್ಟಿಲ್ಲ ಅಥವಾ ಯಾವ ಛಾಯಾಗ್ರಾಹಕರನ್ನೂ ಸಹ ಬರಮಾಡಿಕೊಳ್ಳಲಿಕ್ಕೆ ಪ್ರಯತ್ನ ಪಟ್ಟಿಲ್ಲ. ಆದರೆ ಇವರು ಹೋಗಲಿಕ್ಕೆ ಪ್ರಯತ್ನ ಪಟ್ಟಿದ್ದಾರೆ. ಸ್ವಾಮಿ, ಕಾನೂನು ಏನು ಹೇಳುತ್ತದೆ? The Wild Life Protection Act, 1972, ಬಹಳ ಕಠಿಣವಾಗಿರತಕ್ಕಂಥ ಕಾನೂನಾಗಿದೆ. ಇದರ ಪ್ರಕಾರ ಯಾರೂ ಕೂಡ ಅದರೊಳಗೆ ಹೋಗಕೂಡದು. ಹೋಗಬೇಕಾದರೆ, ಪರ್ಮಿಷನ್ ತೆಗೆದುಕೊಂಡೇ ಹೋಗಬೇಕು ಎಂದು ಇದರಲ್ಲಿ ಇದೆ. ಆದರೆ ಏನೋ ವರದಿಗಾರರು

ಕುತೂಹಲದಿಂದ ಹೋಗಿರಬಹುದು, ಮಂತ್ರಿಗಳು ಬಂದಿದ್ದಾರೆ, ಏನಾದರೂ ಕೇಳೋಣ ಎಂದು ಹೋಗಿರಬಹುದು. He has not utilised the hospitality of the Government. ಸರ್ಕಾರ ಅವರಿಗೆ ಅನುಕೂಲ ಮಾಡಿಕೊಡಲಿಕ್ಕೆ ಅವಕಾಶ ಇದೆ. ಆದರೆ ಅವರು ಅದನ್ನು ಉಪಯೋಗ ಮಾಡಿಕೊಂಡಿಲ್ಲ. ಅವರು ಹೋಗಿರುವಾಗ, ಅವರನ್ನು ಕೇಳಿದಾಗ, ನಾನು ಯಾರನ್ನೂ ಕರೆದಿಲ್ಲ ಎಂದು ಹೇಳಿದ್ದಾರೆ. ಅದರೂ ಇವರು ಹೋಗಿದ್ದಾರೆ. ಒಳಗಡೆ ಇನ್ನೊಂದು ಕೋರ್ ಏರಿಯಾ ಎಂದು ಇರುತ್ತದಂತೆ. ನಾನು ಇದುವರೆಗೂ ಮಂತ್ರಿಯಾಗಿ ಬಂಡೀಪುರಕ್ಕಾಗಲೀ ಅಥವಾ ನಾಗರಹೊಳೆಗಾಗಲೀ ಹೋಗಿಲ್ಲ. ವಾರ ವಾರ ಅವರು ಏತಕ್ಕೆ ಹೋಗುತ್ತಾರೋ ನನಗೆ ಗೊತ್ತಿಲ್ಲ. ನಾನು ಮಂತ್ರಿಯಾಗಿ ಅಲ್ಲಿಗೆ ಹೋಗಿಲ್ಲ. ಇಲ್ಲಿಯವರೆಗೂ ನಾನು ಅದನ್ನು ನೋಡಿಲ್ಲ. ಬಂಡೀಪುರದಲ್ಲಿ ಯಾವುದು ಎಲ್ಲಿದೆ? ಏನಿದೆ? ಎಂಬುದು ನನಗೆ ಗೊತ್ತಿಲ್ಲ. ಅವರು ಒಳಗಡೆ ಹೋಗಿದ್ದಾರೆ. ಒಳಗಡೆ ಕೋರ್ ಏರಿಯಾ ಎಂಬುದೊಂದು ಇದೆ. ಅಲ್ಲಿ ಹೋಗಕೂಡದು ಎಂಬ ಒಂದು ಸಂಪ್ರದಾಯ ಇದೆ. ಆ ಪ್ರಾಣಿಗಳಿಗೆ ಯಾವ ಸಮಯದಲ್ಲಿ ಹೇಗೆ ಬರಬೇಕು ಎನ್ನುವಂತಹ ತಿಳುವಳಿಕೆ ಇರುವುದಿಲ್ಲ. ಏನಾದರೂ ಬಂದು ಅನಾಹುತವಾದರೆ ತೊಂದರೆಯಾಗುತ್ತದೆ ಎನ್ನತಕ್ಕಂಥ ದೃಷ್ಟಿಯಿಂದ ಅಲ್ಲಿಗೆ ಹೋಗಬಾರದು ಎಂದು ಇದೆ. ಅಲ್ಲಿಗೆ ಹೋಗುವುದಕ್ಕೆ ಪ್ರಯತ್ನ ಪಟ್ಟಿರುವುದರಿಂದ, ಮಂತ್ರಿಗಳು ನಾನು ಅವರಿಗೆ ಹೇಳಿಲ್ಲ ಎಂದು ಹೇಳಿದ ಮೇಲೆ, ಇವರ ಪ್ರವೇಶ ಟ್ರೆಸ್‌ಪಾಸ್ ಆಗೇ ಆಗುತ್ತದೆ. ಅಲ್ಲಿ ಟ್ರೆಸ್‌ಪಾಸ್ ಆಗಿದೆ. ಆದುದರಿಂದ ಕಾನೂನು ಪ್ರಕಾರ ಅವರನ್ನು ನಾಲ್ಕೂವರೆ ಗಂಟೆಗೆ ಅರೆಸ್ಟ್ ಮಾಡಿದ್ದಾರೆ. ಆರು ಗಂಟೆಯಲ್ಲಿ ಅವರನ್ನು ಮ್ಯಾಜಿಸ್ಟ್ರೇಟರ ಮನೆಯಲ್ಲಿ ಹಾಜರು ಪಡಿಸಿದರಂತೆ. ತತ್‌ಕ್ಷಣವೇ ಅವರು ಅವರನ್ನು ಬಿಡುಗಡೆ ಮಾಡಿದ್ದಾರೆ. ಆದರೆ ಅವರಲ್ಲಿ ಇರತಕ್ಕಂಥ ವಸ್ತುಗಳನ್ನು ಜಿಲ್ಲಾ ಉಪ ಅರಣ್ಯಾಧಿಕಾರಿಗಳ ವಶಕ್ಕೆ ಕೊಡಬೇಕೆಂದೂ ಕೂಡ ಆರ್ಡರ್ ಮಾಡಿದ್ದಾರೆ. ಏನಾಗಿದೆ ಅಂದರೆ, ಕೋರ್ಟ್ ಆರ್ಡರ್ ಪ್ರಕಾರ ಅವರ ವಶದಲ್ಲಿ ಇರುವುದರಿಂದ ತತ್‌ಕ್ಷಣ ಕೊಡಲಿಕ್ಕೆ ಸಾಧ್ಯವಾಗುವುದಿಲ್ಲ. ಮಾನ್ಯ ಮುಖ್ಯಮಂತ್ರಿಗಳಿಗೆ ಆ ರೀತಿ ಅರ್ಜಿ ಕೊಟ್ಟ ಮೇಲೆ, ಮಾನ್ಯ ಮುಖ್ಯಮಂತ್ರಿಗಳು ಪರಿಶೀಲನೆ ಮಾಡಿ, ಕ್ರಮ ತೆಗೆದುಕೊಳ್ಳಬೇಕು ಎನ್ನುವ ಮಾತನ್ನು ಹೇಳಿದ್ದಾರೆ. ಅದು ನಮ್ಮ ಇಲಾಖೆಗೆ ಬಂದಿದೆ. ನಾವು ಇದನ್ನು ಹೇಗೆ ಮಾಡಬೇಕೆಂದು ಹೇಳಿ ಕಾನೂನು ಇಲಾಖೆಯ ಅಭಿಪ್ರಾಯವನ್ನು ಕೇಳಿದ್ದೇವೆ. ಅಲ್ಲಿಂದ ಅದು ಬಂದ ತಕ್ಷಣ, ನಾವು ಅದಕ್ಕೆ ಏನು ಸಹಾಯ ಮಾಡಬೇಕೋ ಅದನ್ನು ಮಾಡುತ್ತೇವೆ.

ಶ್ರೀ ಜಗದೀಶ್ ಶೆಟ್ಟರ್ : ಮಾನ್ಯ ಅಧ್ಯಕ್ಷರೇ, ...

ಅಧ್ಯಕ್ಷರು : ಶೂನ್ಯ ವೇಳೆಯಲ್ಲಿ no question of supplementaries. You can't ask anything. Please ಮಾನ್ಯ ಮಂತ್ರಿಗಳು ರಿಪ್ಲೈ ಕಮೆನ್ಸ್ ಮಾಡಿ.

ಗೊಂದಲ

ಶ್ರೀ ಪಿ.ಜಿ.ಆರ್. ಸಿಂಧ್ಯ : ..... ಸರ್ಕಾರ ಆ ಅಧಿಕಾರಿ ಮೇಲೆ ಕ್ರಮ ತೆಗೆದುಕೊಳ್ಳಬೇಕು. ಅಧಿಕಾರಿಯ ಉದ್ಧಟತನದ ಮೇಲೆ ಕ್ರಮ ತೆಗೆದುಕೊಳ್ಳಬೇಕು, ವಿಚಾರಣೆ ಮಾಡಿಸಬೇಕು. ತತ್‌ಕ್ಷಣವೇ ಕ್ಯಾಮೆರಾ ಮತ್ತು ಟಾಟಾ ಸುಮೋವನ್ನು ಬಿಡುಗಡೆ ಮಾಡಿಸಬೇಕು. ಇದರ ಬಗ್ಗೆ ವಿಚಾರಣೆ ಮಾಡುತ್ತೇನೆ ಮತ್ತು ಬಿಡುಗಡೆ ಮಾಡಿಸುತ್ತೇನೆ ಎಂಬ ಭರವಸೆಯನ್ನು ಮಾನ್ಯ ಮಂತ್ರಿಗಳು ನೀಡಲಿ. ಕಾನೂನಿನ ರಕ್ಷಣೆ ತೆಗೆದುಕೊಂಡು ಅಧಿಕಾರಿಯನ್ನು ಡಿಫೆಂಡ್ ಮಾಡಿಕೊಳ್ಳುವುದನ್ನು ನಾನು ಒಪ್ಪುವುದಿಲ್ಲ.

ಶ್ರೀ ಕೆ.ಹೆಚ್. ರಂಗನಾಥ್ : ಮಾನ್ಯ ಅಧ್ಯಕ್ಷರೇ, ಇಲಾಖೆಗೆ ಬರೆದಿದ್ದೇನೆ. ಅದಷ್ಟು ಜಾಗ್ರತೆ ಅವರಿಂದ ನಾನು ತರಿಸಿಕೊಂಡು ಬಿಡುಗಡೆಯನ್ನು ಇವತ್ತೇ ಮಾಡಿಸಿ ಕೊಡುತ್ತೇನೆ.

ಅಧ್ಯಕ್ಷರು : ಬೇರೆ ವಿಷಯ ಇವತ್ತು ಪ್ರಸ್ತಾಪ ಬೇಡಿ. ಈಗಾಗಲೇ ಇದು 45 ನಿಮಿಷ ತೆಗೆದುಕೊಂಡಿದೆ. ಬೇಕಾದರೆ ಇತರ ವಿಚಾರ ನಾಳೆ ಪ್ರಸ್ತಾಪ ಮಾಡಿ.

ಶ್ರೀ ಕೆ.ಹೆಚ್. ರಂಗನಾಥ್ : ಇಲಾಖೆಯಿಂದ ಏನು ಅಭಿಪ್ರಾಯ ಬರುತ್ತದೋ ಅದನ್ನು ನಾನು ಮಾನ್ಯ ಮಾಡುತ್ತೇನೆ.

ಅಧ್ಯಕ್ಷರು : ಆಯಿತು, ಈ ಬಗ್ಗೆ ಚರ್ಚೆ ಸಾಕು. ಮಾನ್ಯ ಫೋರ್ಪಡೆಯವರು ಈಗ ರಿಪ್ಲೈ ನೀಡಲಿ. I will take up the calling attention after the minister's reply as promised by me.

4. ವಿತ್ತೀಯ ಕಾರ್ಯಕಲಾಪ

2002-2003ನೇ ಸಾಲಿನ ಅನುದಾನ ಬೇಡಿಕೆಗಳ ಮೇಲಿನ ಚರ್ಚೆಗೆ ಸಚಿವರಾದ ಉತ್ತರ ಮತ್ತು ಮತಕ್ಕೆ ಹಾಕುವುದು.

†ಶ್ರೀ ಎಂ. ವೈ. ಫೋರ್ಪಡೆ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು) : ಮಾನ್ಯ ಅಧ್ಯಕ್ಷರೇ, ಪಂಚಾಯತ್ ರಾಜ್ ಮತ್ತು ರೂರಲ್ ಡೆವಲಪ್‌ಮೆಂಟ್ ಈ ಇಲಾಖೆಯ ಬೇಡಿಕೆಯ ಮೇಲೆ ಮಾತನಾಡುವಾಗ, ಈ ಕಡೆಯ ಮಾನ್ಯ ಗುರುಸ್ವಾಮಿಯವರು ನಮಗೆ ಎಸ್.ಕೆ.ಡೇ. ಯವರ ನೆನಪು ಮಾಡಿ ಕೊಟ್ಟರು. ನಾನು ಅದನ್ನು ಸ್ವಾಗತ ಮಾಡುತ್ತೇನೆ. ಏಕೆಂದರೆ, ಜವಾಹರಲಾಲ್ ನೆಹರೂರವರ ಕಾಲಕ್ಕೆ ಎಸ್.ಕೆ.ಡೇ.ಯವರು ದೇಶಾದ್ಯಂತ ಕಮ್ಯೂನಿಟಿ ಡೆವಲಪ್‌ಮೆಂಟ್ ಬ್ಲಾಕ್ಸ್ ಎಂದು ಇಡೀ ದೇಶದಲ್ಲಿ ಏನು ಮಾಡಿದ್ದರು, ಆ ವ್ಯವಸ್ಥೆ ಈ ನಮ್ಮ ವ್ಯವಸ್ಥೆಗೆ ಬುನಾದಿ ಎಂದು ನಾನು ಹೇಳಲಿಕ್ಕೆ ಇಷ್ಟಪಡುತ್ತೇನೆ. ತಮಗೆ ಗೊತ್ತಿದೆ. ಆ ಕಾಲಕ್ಕೆ ಪ್ರತಿಯೊಂದು ತಾಲ್ಲೂಕಿನಲ್ಲಿ ನ್ಯಾಷನಲ್ ಎಕ್ಸ್‌ಟೆನ್‌ಷನ್ ಸರ್ವೀಸ್ ಎಂದು ಸ್ಥಾಪನೆ ಮಾಡಿದ್ದರು. ಈಗ ಅದು ಇಲ್ಲ. ಅದು ಮಾಡದೇ ಹೋಗಿದ್ದರೆ, ಹಸಿರು ಕ್ರಾಂತಿ ಈ ದೇಶದಲ್ಲಿ ಆಗುವುದು ಬಹಳ ಕಷ್ಟವಿತ್ತು. ಅದೇ ಬುನಾದಿಯನ್ನು ಇಟ್ಟುಕೊಂಡು ಮಾನ್ಯ ದೇವರಾಜ್ ಅರಸ್‌ರವರ ಕಾಲಕ್ಕೆ ತಾಲ್ಲೂಕು ಬೋರ್ಡ್‌ಗಳನ್ನು ಸ್ಥಾಪನೆ ಮಾಡಿ, ನಾವು ಮತ್ತು ನೀವೆಲ್ಲರೂ ಬೇಕಾದಷ್ಟು ಸೇವೆಯನ್ನು ಗ್ರಾಮಾಂತರ ಪ್ರದೇಶದಲ್ಲಿ ಮಾಡಿದ್ದು ತಮಗೆ ನೆನಪಿರಬೇಕು. ಆಗಲೂ ಕೂಡ ಟೂ ಟಯರ್ ಸಿಸ್ಟಮ್ ಇತ್ತು. ತಾಲ್ಲೂಕು ಬೋರ್ಡ್ ಮತ್ತು ಗ್ರಾಮ್ ಪಂಚಾಯಿತಿಗಳು ಆಗ ಇದ್ದವು. ಕೊಂಡಜ್ಜಿ ಬಸಪ್ಪ ಅವರ ರಿಪೋರ್ಟ್ 1963ರಲ್ಲಿ ಬಂತು. ನಾನು ಇಲ್ಲಿಗೆ ಸದಸ್ಯರಾಗಿ ಬಂದಿದ್ದು 1959ರಲ್ಲಿ ನನಗೆ ಚೆನ್ನಾಗಿ ನೆನಪಿದೆ. ಏಕೆಂದರೆ, ಬಲವಂತರಾಯ ಮೆಹ್ತಾ ರಿಪೋರ್ಟ್‌ನಲ್ಲಿ ಆಗ ತಾನೇ 1968 ಬಂದಿತ್ತು. ಬಲವಂತರಾಯ್ ಮೆಹ್ತಾ ರಿಪೋರ್ಟ್‌ನಲ್ಲಿ ಒಂದು ಬುನಾದಿ ಮಾತು ಇದೆ. ಅದು ಪ್ರಥಮ ಬಾರಿಗೆ ಈ ದೇಶದಲ್ಲಿ ಒಂದು ಮಾತನ್ನು ಬಹಳ ಸ್ಪಷ್ಟವಾಗಿ ಹೇಳಿದರು. ಈ ಲೋಕಲ್ ಬಾಡೀಸ್ ಏನಿದೆ, ಅದು ಬರೇ ಮುನಿಸಿಪಲ್ ಫಂಕ್ಷನ್ಸ್ ಮಾಡಲಿಕ್ಕಲ್ಲ, ಅದು ಎಲ್ಲಾ ಡೆವಲಪ್‌ಮೆಂಟ್ ಫಂಕ್ಷನ್ಸ್‌ನಲ್ಲಿ ಆಸಕ್ತಿ ವಹಿಸಬೇಕು, ಎಲ್ಲಿಯವರೆಗೂ ನಾವು ಎಲೆಕ್ಟೆಡ್ ಬಾಡೀಸ್ ಎಲ್ಲಾ ಹಂತದಲ್ಲಿ ಮಾಡಿ, ಆ ಜವಾಬ್ದಾರಿಯನ್ನು ಕೊಡುವುದಿಲ್ಲವೋ, ಅಲ್ಲಿಯವರೆಗೆ ಪೀಪಲ್ಸ್ ಇನ್‌ವಾಲ್ವ್‌ಮೆಂಟ್ಸ್ ಅಂತ ನಾವೇನು ಹೇಳುತ್ತೇವೋ ಅದು ಬರುವುದಿಲ್ಲ. ಆ ಡೆವಲಪ್‌ಮೆಂಟ್‌ನಲ್ಲಿ ಅವರು ಆಸಕ್ತಿ